# ಚಿಗುರು

ಇದು ಭವಿಷ್ಯದ ಹೆಮ್ಮರ



ಎಸ್.ಡಿ.ಎಂ. ಕಾಲೇಜು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

# ಸಂಪಾದಕೀಯ

## e-ಯುಗದ ಚಿಗುರು

ಎಸ್.ಡಿ.ಎಂ ಶಿಕ್ಷಣ ಸಂಸ್ಥೆಯ ಸಾಧನೆಯ ಯಾನಕ್ಕೆ ಇದೀಗ ಹಿರಿಮೆಯ ಗರಿ. ನಮ್ಮ ಸಂಸ್ಥೆಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಶಕ್ತಿ ವಿಸ್ತಾರವಾಗುತ್ತಿದೆ. ಶಿಕ್ಷಣ ಸಂಸ್ಕೃತಿ ಶುದ್ಧತೆಯ ಆಲೋಚನೆಗಳನ್ನು ಹೊಸ ಪೀಳಿಗೆಗೆ ದಾಟಿಸುವಲ್ಲಿ ಸದಾ ಮುಂಚೂಣಿಯಲ್ಲಿರುವ ನಮ್ಮ ಸಂಸ್ಥೆಯ ಪದವಿ ಕಾಲೇಜಿನ ಸಾಧನೆಯ ಹೆಜ್ಜೆಗಳನ್ನು ದಾಖಲಿಸುವ ಬರಹಗಳು ಈ ಸಲದ ಸಂಚಿಕೆಯಲ್ಲಿವೆ.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿಂದ ಕಾಲೇಜು ಹಲವಾರು ಹೊಸ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅದರಲ್ಲೂ ಕ್ಯಾಂಪಸ್ ಈಗ e-ಅಂಗಳವಾಗಿ ಬದಲಾಗಿದೆ. 'ಗೂಗಲ್ ಕ್ಲಾಸ್‌ರೂಮ್' ಎಂಬ ಪರಿಕಲ್ಪನೆಯೊಂದಿಗೆ ಹೊಸ ಹೊಸ ಕೋರ್ಸ್‌ಗಳು ಆರಂಭಗೊಂಡಿವೆ. ಸಂಸ್ಥೆಯ e-ಜರ್ನಲ್, e-ಬುಲೆಟಿನ್ ಪ್ರಾರಂಭವಾಗಿ ಯಶಸ್ಸು ಸಹ ಕಂಡಿದೆ ಎಂಬುದು ಸಂತೋಷದ ಸಂಗತಿ. ಪತ್ರಿಕೋದ್ಯಮ ವಿದ್ಯಾರ್ಥಿಗಳು ಬರೆದ ಬರಹಗಳಿಗೆ ವೇದಿಕೆಯಾಗಿರುವ ಈ 'ಚಿಗುರು' ಭವಿಷ್ಯದ ಪತ್ರಿಕೋದ್ಯಮಕ್ಕೆ ಗಟ್ಟಿಯಾದ ಅಡಿಪಾಯ ಹಾಕುತ್ತದೆ. ಇಲ್ಲಿಯ ಪ್ರತಿಯೊಂದು ಪುಟದ ಬರಹಗಳು ಬರವಣಿಗೆ ಕುರಿತ ವಿದ್ಯಾರ್ಥಿ ಬರಹಗಾರರ ಶ್ರದ್ಧೆಯ ದ್ಯೋತಕವಾಗಿವೆ. ಪತ್ರಿಕೋದ್ಯಮ ವಿಭಾಗದ ಸಮುದಾಯ ಬಾನುಲಿ 'ರೇಡಿಯೋ ನಿನಾದ' ಐದು ವಸಂತಗಳನ್ನು ಪೂರೈಸಿ 6ನೇ ವರ್ಷಕ್ಕೆ ಕಾಲಿಟ್ಟಿದೆ. ನಮ್ಮ ಕಾಲೇಜಿನ ಎನ್.ಸಿ.ಸಿ, ಎನ್.ಎಸ್.ಎಸ್, ರೋವರ್ಸ್ ಆ್ಯಂಡ್ ರೇಂಜರ್ಸ್ ಹಾಗೂ ಕ್ರೀಡಾ ವಿಭಾಗದ ವಿದ್ಯಾರ್ಥಿಗಳು ರಾಜ್ಯ, ರಾಷ್ಟ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿರುವುದು ಸಂತಸದ ವಿಚಾರ. ಸಮಾಜಮುಖಿ ಚಿಂತನೆಗಳ ಕಾರಣಕ್ಕಾಗಿಯೇ 'ಚಿಗುರು' ಭಿನ್ನ ಪ್ರಾಯೋಗಿಕ ಪತ್ರಿಕೆ ಎನ್ನಿಸಿಕೊಂಡಿದೆ. ಶೈಕ್ಷಣಿಕ ಸಾಧನೆಯ ಜೊತೆಗೆ ಭವಿಷ್ಯದಲ್ಲಿ ಹೊಸದಾದ ಹೆಜ್ಜೆಗಳನ್ನು ಇರಿಸುವ ಕನಸುಗಳೊಂದಿಗಿನ ಯುವಮನಸ್ಸುಗಳ ಅಭಿವ್ಯಕ್ತಿಯ ಮಾಧ್ಯಮವಾಗಿದೆ. ವಿದ್ಯಾರ್ಥಿಗಳ ಸಾಧನೆಯ ಕನಸುಗಳು ನನಸಾಗಲಿ ಎಂಬ ಆಶಯದೊಂದಿಗೆ....

– ಸಂಪಾದಕರು


ದಿನಾಂಕ : 29-02-2020

ಸಂಪುಟ : 26 ಸಂಚಿಕೆ : 01

ನಿರ್ವಹಣೆ : ಅಂತಿಮ ಪತ್ರಿಕೋದ್ಯಮ

ಸಂಪಾದಕರು : ಶಾಂತ ಕುಮಾರ್ ಡಿವಿಜಿ

ಮುಖಪುಟ & ಹಿಂಬದಿ ಚಿತ್ರ : ವಿಜೇತ್ ಕೆ.ವಿ

ಪುಟ ವಿನ್ಯಾಸ : ವೈ.ಎಸ್. ಬಾಲಕೃಷ್ಣ ಆಚಾರ್ಯ

ಮುಖಪುಟ ವಿನ್ಯಾಸ : ಕೃಷ್ಣಪ್ರಶಾಂತ್. ವಿ

ಮುದ್ರಣ : ಮಂಜುಶ್ರೀ ಪ್ರಿಂಟರ್ಸ್ ,ಉಜಿರೆ


# ಚಿಂತನ

## ಝೆನ್ ಮತ್ತು ನಾವು

ಚೀನಾದ ರಾಜಧಾನಿ ಪಿಕಿಂಗ್ ರಸ್ತೆಯಲ್ಲಿ ಒಮ್ಮೆ ಪ್ರಸಿದ್ಧ ಝೆನ್ ಗುರುವೊಬ್ಬರು ನಡೆದು ಬರುತ್ತಿದ್ದರು. ಅವರನ್ನು ಕಾಣಲು ಜನ ಬರುತ್ತಿದ್ದರು. ಸಮಸ್ಯೆಗಳಿಗೆ ಅವರು ಸರಳ ಪರಿಹಾರವನ್ನು ಸೂಚಿಸುತ್ತಿದ್ದರು. ಮೌನವೇ ಮೂರ್ತಿವೆತ್ತಂತೆ ಇಡೀ ಝೆನ್ ಪರಂಪರೆಯ ಮೂರ್ತ ರೂಪದಂತೆ ಅವರು ಕಂಗೊಳಿಸುತ್ತಿದ್ದರು.

ಅದೇ ರಸ್ತೆಯಲ್ಲಿ ಚೀನಿ ಚಕ್ರವರ್ತಿಯ ಅಂಗರಕ್ಷಕನೊಬ್ಬ ನಡೆದು ಬರುತ್ತಿದ್ದ. ತಲೆಯಲ್ಲಿ ಪ್ರಶ್ನೆಯೊಂದು ಮೂಡಿತು. ಆ ವೃದ್ಧ ಝೆನ್ ಗುರುವನ್ನು ಕಂಡೊಡನೆ ಅಂಗರಕ್ಷಕ ಕೇಳುತ್ತಾನೆ. ಸ್ವರ್ಗ ಮತ್ತು ನರಕ ಎಂದರೇನು?. ಗುರು ಮುಗುಳ್ನಗುತ್ತಾ ಮೊದಲು ನೀನು ಯಾರು ಎಂದು ಕೇಳುತ್ತಾನೆ? ನಾನು ಚಕ್ರವರ್ತಿಯ ಅಂಗರಕ್ಷಕ ಎನ್ನುತ್ತಾನೆ. ನಿನ್ನನ್ನು ನೀನು ರಕ್ಷಿಸಿಕೊಳ್ಳಲಾಗದ ನೀನು ಹೇಗೆ ಚಕ್ರವರ್ತಿಗಳನ್ನು ರಕ್ಷಿಸುವೆಯೋ ಏನೋ? ಎನ್ನುತ್ತಾನೆ. ಮನಬಂದಂತೆ ಮಾತನಾಡುತ್ತಿದ್ದೀಯಾ, ಈ ಕ್ಷಣಕ್ಕೆ ನಿನ್ನನ್ನು ಕತ್ತಿಯಿಂದ ಕತ್ತರಿಸುತ್ತೇನೆ ಹುಷಾರು ಎಂದು ಎಚ್ಚರಿಸುತ್ತಾನೆ. ಮಗು ನೋಡು ನಿನ್ನ ಮೊದಲರ್ಧದ ಪ್ರಶ್ನೆಗೆ ನೀನೇ ಉತ್ತರಿಸಿದ್ದೆ. ನೀನೀಗ ನರಕದ ಬಾಗಿಲಿನಲ್ಲಿ ಇದ್ದೀಯ ಎಂದು ಝೆನ್ ಹೇಳುತ್ತಾನೆ. ತಕ್ಷಣ ಅಂಗರಕ್ಷಕನಿಗೆ ತನ್ನ ತಪ್ಪಿನ ಅರಿವಾಗಿ ಖಡ್ಗ ಕೆಳಗಿಟ್ಟು ಝೆನ್‌ಗೆ ನಮಿಸಿದ. ನೋಡು ಮಗು ಉಳಿದರ್ಧ ಪ್ರಶ್ನೆಗೂ ನೀನೇ ಉತ್ತರಿಸಿದೆ, ನೀನೀಗ ಸ್ವರ್ಗದ ಬಾಗಿಲಿನಲ್ಲಿ ಇದ್ದೀಯ ಎಂದು ಹೇಳಿದ. ನೋಡು ನಿನ್ನ ಮನಸ್ಸನ್ನು ವಿವೇಚನೆಯ ಕೈಯಲ್ಲಿ ಕೊಡುವ ಮೂಲಕ ನೀನು ಸ್ವರ್ಗದ ಬಾಗಿಲಿನಲ್ಲಿ ಇದ್ದೀಯ ಎಂದ ಝೆನ್ ಗುರು.

ಅಯ್ಯಾ ಎಂದರೆ ಸ್ವರ್ಗ; ಎಲವೋ ಎಂದರೆ ನರಕ. ಹೀಗೆಂದು ಬಸವಣ್ಣ ಹೇಳಿದ್ದಾರೆ. ನಾವು ಆಡುವ ಮಾತುಗಳು ನಮ್ಮ ಸಂಸ್ಕೃತಿಯನ್ನು ಸೂಚಿಸುತವೆ. ಅದರಿಂದಲೇ ನಾಲಿಗೆಯನ್ನು ಗೆದ್ದರೆ ನಾಡನ್ನೇ ಗೆದ್ದಂತೆ. ಅದರಿಂದ ನಾವು ಆಡುವ ಮಾತು ಮೆಚ್ಚಿ ಅಹುದಹುದು ಎನ್ನುವಂತಿರಬೇಕು ಆಗಷ್ಟೇ ನಾವು ಬದುಕಿನಲ್ಲಿ ಸಾಧಿಸುವುದಕ್ಕೆ ಸಾಧ್ಯ.

## ಮುಖ್ಯ ಅತಿಥಿಗಳಿಗೆ ನಲ್ಮೆಯ ಸ್ವಾಗತ



ನಮ್ಮ ಈ ವರ್ಷದ ಕಾಲೇಜು ವಾರ್ಷಿಕೋತ್ಸವಕ್ಕೆ ಅಭ್ಯಾಗತರಾಗಿ ಆಗಮಿಸುತ್ತಿರುವವರು ಭಾರತೀಯ ಆಡಳಿತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಲಿನಿ ರಜನೀಶ್, ಇವರು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಆಗಿ ಮತ್ತು ಹದಿಮೂರಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ ಇವರಿಗೆ ಅತ್ಯುತ್ತಮ ಆಡಳಿತ ಸೇವಾ ಅಧಿಕಾರಿಯಾಗಿ ಮನ್ನಣೆ ಸಹ ಸಿಕ್ಕಿದೆ. ನಮ್ಮ ಕಾಲೇಜು ವಾರ್ಷಿಕೋತ್ಸವ ದಂದು ನಮ್ಮ ಕಾಲೇಜಿಗೆ ಆಗಮಿಸುತ್ತಿರುವುದು ನಮಗೆಲ್ಲಾ ಸಂತೋಷದ ವಿಷಯ ಅವರಿಗೆ ಚಿಗುರು ಬಳಗದ ಪರವಾಗಿ ಆತ್ಮೀಯ ಸ್ವಾಗತ.

## ಮೂರು ವರ್ಷಗಳ ಹರ್ಷದ ದಿನಗಳು...

ಫ್ರೆಂಡ್ಸ್‌ಗಳು ಮನಸ್ಸಿಗೆ ಹತ್ತಿರ ಆಗೋರು. ಹೊಸ ಕ್ರಶ್‌ಗಳು, ಹೃದಯದ ಬಡಿತ ಏರಿಸೋರು, ಇಷ್ಟ ಆಗೋ ಮೇಷ್ಟು , ಇಷ್ಟ ಆಗ್ದೇ ಇರೊ ಕ್ಲಾಸ್‌ಗಳು..! ದಿನಗಳಂತೂ ಲಂಗು-ಲಗಾಮು ಇಲ್ದೇ ಇರೋ ಕುದುರೆಯ ಹಾಗೆ ಓಡುತಿದ್ವು. ಹಾಗೋ ಹೀಗೋ ಮೊದಲ ವರ್ಷ ಮುಗಿದದ್ದೇ ಗೊತ್ತಾಗಲಿಲ್ಲ. ಗುರು ಫರ್ಸ್ಟ್ ಇಯರ್ ನಲ್ಲಿ ಏನೂ ಮಾಡೇ ಇಲ್ಲವಲ್ಲೋ ಅಂತ ಒಬ್ಬ. ಏಯ್! ಯಾಕ್ ತಲೆ ಕೆಡಿಸಿಕೊಳ್ತಿಯಾ ಮಚಾ ಇನ್ನೂ ಎರಡು ವರ್ಷ ಇದೆಯಲ್ಲಾ ಅಂತ ಇನ್ನೊಬ್ಬ.

ರಜೆ ಎಲ್ಲಾ ಮುಗಿಸಿ ಬಂದು ಸೆಕೆಂಡ್ ಇಯರ್‌ಗೆ ಬಂದಾಯ್ತು. ಸದ್ಯ ಯಾವ್ದು ಬ್ಯಾಕ್ ಲಾಗ್ ಇರಲಿಲ್ಲ. ನಮ್ಮ ಜ್ಯೂನಿಯರ್ ಗಳು ಕಾಲೇಜ್ಗೆ ಈಗ ತಾನೆ ಪಾದಾರ್ಪಣೆ ಮಾಡಿರ್ತಾರೆ. ಇದೇ ಟೈಮ್ ಅಲ್ಲಿ ತೆರೆಮರೆಯಲ್ಲಿ ಕಣ್ಣುಗಳು ಮಾತಾಡೋದು! ಆ ಹುಡುಗಿ ಚೆನ್ನಾಗಿದಾಳಲ್ಲ ಮಚಾ, ಈ ಹುಡುಗಿ ಚೆನ್ನಾಗಿ ಮಾತಾಡಿಸ್ತಾಳಲ್ಲ ಅಂತ ಗೆಳೆಯರ ಗುಂಪಿನ ಜೊತೆ ಸೇರಿ ಹರಟೆ ಕೊಚ್ಚೋದು. ಈ ಹುಡುಗೀರು ಏನೂ ಕಮ್ಮಿ ಇರೋಲ್ಲ! ಕದ್ದು ನೋಡೋದು, ಕಣ್ ಮಿಟುಕಿಸೋದ್ರಲ್ಲಿ ಅವರದು ಎತ್ತಿದ ಕೈ! ಅಂತೂ ಇಂತೂ ಆಡಿ ಕಳೆದು ಸೆಕೆಂಡ್ ಇಯರ್ ಮುಗಿಯುವ ಹಂತಕ್ಕೆ ಬಂದಿರುತ್ತದೆ. ಈ ವರ್ಷ ಒಂದೆರಡು ಸಬ್ಜೆಕ್ಟು ಬ್ಯಾಕ್ ಆದರೂ ಪರವಾಗಿಲ್ಲ, ನೆಕ್ಸ್ಟ್ ಇಯರ್ ನಲ್ಲಿ ನೋಡಿಕೊಳ್ಳುವ ಅಂತ ನಮಗೆ ನಾವೇ ಸಮಾಧಾನ ಮಾಡಿಕೊಳ್ಳುತ್ತೇವೆ.

ಅಂತೂ ನಮ್ಮ ಡಿಗ್ರಿ ಲೈಫ್ ನ ಕೊನೇ ಹಂತ ಬಂದೇಬಿಟ್ಟಿತ್ತು. ಅದೇ ಫೈನಲ್ ಇಯರ್! ಈ ವರ್ಷ ಕಳೆದೆರೆಡು ವರ್ಷಗಳ ಹಾಗಿರಲಿಲ್ಲ. ಲಾಸ್ಟ್ ಇಯರ್ ಅಂತೇನೋ ಗೆಳೆಯರು ಧಿಡೀರನೆ ಸೀರಿಯಸ್ ಆಗ್ಬಿಟ್ಟಿದ್ರು. ದಿನಗಳಂತೂ ಬೆಳಕಿನ ವೇಗದಲ್ಲಿ ಚಲಿಸುತ್ತಿರುವಂತೆ ಭಾಸವಾದವು. ನೋಡ್ತಾ ಇರುವಂತೆಯೇ ಸೆಂಡ್‌ಆಫ್ ದಿನ ಬಂದಿತ್ತು. ಕೊನೆಯ ಕ್ಷಣದಲ್ಲಿ ಹಿಂತಿರುಗಿ ನೋಡಿದರೆ ಎಷ್ಟೊಂದು ನೆನಪುಗಳು, ಹೆಜ್ಜೆ ಗುರುತುಗಳು..! ಮಚಾ, ಬಾಸು, ಗುರು ಅಂತ ತರ್ಲೆ, ತಮಾಷೆ ಮಾಡಿ ಓಡಾಡಿದ ಸಿಹಿಕಹಿ ಪ್ರಸಂಗಗಳು ಮನದಲ್ಲಿ ಅಚ್ಚಳಿಯದೆ ಕುಳಿತಿರುತ್ತವೆ. ಹಾಗೇ ನಾವು ಕಳೆದ ಮಧುರ ಕ್ಷಣಗಳು.

– ಶಾಂತಕುಮಾರ್ ಡಿವಿಜಿ

III ಬಿ.ಎ

## ವಿಶೇಷ ಸುದ್ದಿಗಳು

**ಕಾಲೇಜಿನ ಪ್ರಾಂಶುಪಾಲರಿಗೆ ತುಮಕೂರು ವಿ.ವಿಯಂದ ಮೊನ್ನೆ ಗೌರವ ಡಾಕ್ಟರೇಟ್**

**29ರಂದು ಸಂಭ್ರಮದ ಅಚೀವರ್ಸ್ ಡೇ. ಮುಖ್ಯ ಅತಿಥಿಯಾಗಿ ಇಂಗ್ಲೆಂಡಿನ ಖ್ಯಾತ ವೈದ್ಯ ಪ್ರೊ. ನರೇಂದ್ರ ಎ**

**ಇತಿಹಾಸ ವಿಭಾಗದಿಂದ ನಿನ್ನೆ ಮತ್ತು ಇಂದು ರಾಷ್ಟ್ರಮಟ್ಟದ ವಿಶೇಷ ಸಮ್ಮೇಳನ**

## ನಮ್ಮ ಕಾಲೇಜು ಈಗ 'ಸ್ಟಾರ್‌ಕಾಲೇಜು'



ನಮ್ಮ ಎಸ್.ಡಿ.ಎಂ ಕಾಲೇಜು ಶೈಕ್ಷಣಿಕ ರಂಗದಲ್ಲಿ ಹಲವು ಸಾಧನೆ ಮಾಡಿದೆ,ಮಾಡುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಎಸ್.ಡಿ.ಎಂ ಸದಾ ಒಂದಿಲ್ಲೊಂದು ಕಿಯಾತ್ಮಕ ಪ್ರಯೋಗಗಳನ್ನು ಮಾಡುತ್ತಲೇ ಇರುತ್ತದೆ. ಆದ್ದರಿಂದಲೇ ನಮ್ಮ ಕಾಲೇಜಿಗೆ ಹಲವು ಪ್ರಶಸ್ತಿಗಳೂ ಮನ್ನಣೆಗಳೂ ಬರುತ್ತಿರುತ್ತವೆ. ಈ ವರ್ಷದ ವಿಶೇಷ ಬೆಳವಣಿಗೆಯಲ್ಲಿ ಸ್ಟಾರ್ ಕಾಲೇಜು ಮಾನ್ಯತೆ ಲಭಿಸಿದೆ.ಮೂರು ವಿಷಯಗಳಲ್ಲಿ ಬಿ.ವೋಕ್ ವೃತ್ತಿಪರ ಕೋರ್ಸ್‌ಗಳಿಗರ ಯು.ಜಿ.ಸಿ ಅನುಮತಿ ನೀಡಿದೆ ಹಾಗೂ ನ್ಯಾಕ್‌ಗೆ ಸಂಭಂದಿಸಿದಂತೆ ನಮ್ಮ ಕಾಲೇಜಿಗೆ ಸತತ ಮೂರು ಬಾರಿ ಎ ಗ್ರೇಡ್ ಮಾನ್ಯತೆ ಹಾಗೂ ಅನುಭವ ಮತ್ತು ಸಾಮರ್ಥ್ಯವನ್ನು ಪರಿಗಣಿಸಿ ನಮ್ಮ ಕಾಲೇಜನ್ನು ಪರಾಮರ್ಶ ಯೋಜನೆಯಡಿ 'ಮೆಂಟರ್' ಎಂಬ ಮಹತ್ವದ ಹೊಣೆಗಾರಿಕೆ ನೀಡಲಾಗಿದೆ.ವಿಜ್ಞಾನ ವಿಭಾಗಗಳನ್ನು ಮತ್ತಷ್ಟು ಬಲಪಡಿಸುವ ದೃಷ್ಟಿಯಿಂದ ಉಜಿರೆ ಕಾಲೇಜಿಗೆ ಈ ಯೋಜನೆಯಡಿ 82 ಲಕ್ಷ ರೂ.ಗಳ ಅನುದಾನದೊಂದಿಗೆ ವಿಜ್ಞಾನ ವಿಭಾಗಗಳನ್ನು ಮೇಲ್ದರ್ಜೆಗೆ ಏರಿಸಲು ಉತ್ತೇಜನ ದೊರಕಿದೆ. ಕಾಲೇಜಿನ ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ ಹಾಗೂ ಬಯೋಟೆಕ್ನಾಲಜಿ ವಿಭಾಗಗಳು ಸ್ಟಾರ್ ಕಾಲೇಜು ಯೋಜನೆಯಡಿ ಗುರುತಿಸಲ್ಪಟ್ಟಿವೆ. ವಿಭಾಗಗಳ ಪ್ರಯೋಗಾಲಯದ ಉತ್ಕೃಷ್ಟತೆ, ಅಗತ್ಯ ಸೌಕರ್ಯಗಳ ಲಭ್ಯತೆ ಹಾಗೂ ವಿಚಾರ ಸಂಕಿರಣ, ಸಂಶೋಧನಾ ಯೋಜನೆ, ವಿದ್ಯಾರ್ಥಿಕೇಂದ್ರಿತ ಚಟುವಟಿಕೆಗಳಿಗೆ ಅನುದಾನ ಬಳಕೆಯಾಗಲಿದೆ. ಪದವಿ ಕಾಲೇಜಿನ ವಿಜ್ಞಾನ ವಿಷಯಗಳ ಅಧ್ಯಯನದ ಮೂಲಕ ಉದ್ಯೋಗಾವಕಾಶಗಳ ಲಭ್ಯತೆಯ ಅಂಶವನ್ನು ಪರಿಗಣಿಸಿ ಕೇಂದ್ರ ಸರಕಾರವು ವಿಜ್ಞಾನ ವಿಭಾಗಗಳ ಗುಣಮಟ್ಟ ವೃದ್ಧಿಗೆ ರೂಪಿಸಿರುವ ವಿಶೇಷ ಯೋಜನೆಯಡಿ ಈ 'ಸ್ಟಾರ್‌ಕಾಲೇಜು' ಪರಿಕಲ್ಪನೆಯೂ ಸೇರಿದೆ. ಪರಾಮರ್ಶ್ ಯೋಜನೆಯಡಿ ಎಂಟು ಕಾಲೇಜುಗಳು ನೊಂದಾಯಿಸಲ್ಪಟ್ಟಿದ್ದು ಮಾರ್ಗದಶನ ನೀಡಲಾಗುತ್ತಿದೆ. ಇದಲ್ಲದೆ ಯುಜಿಸಿಯು ಶಿಕ್ಷಣದಲ್ಲಿ ಪಠ್ಯಕ್ಕಿಂತ ಪ್ರಾಯೋಗಿಕ ಕಲಿಕೆಗೆ ಹೆಚ್ಚಿನ ಅವಕಾಶ ನೀಡುವ ಮೂಲಕ ಉದ್ಯೋಗಾಧಾರಿತ ಕೌಶಲ್ಯಾಧಾರಿತ ಮೂರು ಬಿ-ವೋಕೆಶನಲ್ ಕೋರ್ಸ್‌ಗಳನ್ನು ನಡೆಸಲು ಉಜಿರೆ ಕಾಲೇಜಿಗೆ ಮನ್ನಣೆ ನೀಡಿತ್ತು. ಇದರ ಜೊತೆಗೆ ಈಗ 'ಸ್ಟಾರ್‌ಕಾಲೇಜು' ರೂಪದಲ್ಲಿ ಮತ್ತೊಂದು ಮನ್ನಣೆ ದೊರಕಿದಂತಾಗಿದೆ.

# ಬಳಸಿಕೊಳ್ಳಿ, 'e'–ವೇದಿಕೆ ನಿಮಗಾಗಿ...

ಉತ್ತಮ ಶಿಕ್ಷಕರ ಕೈಯಲ್ಲಿ ತಂತ್ರಜ್ಞಾನವನ್ನು ಬದಲಾಯಿಸುವ ಶಕ್ತಿ ಇದೆ

ಎಸ್. ಡಿ.ಎಂ. ಕಾಲೇಜು ಶಿಕ್ಷಣ ರಂಗದಲ್ಲಿ ತನ್ನದೇ ಆದ ಹೊಸ ಆವಿಷ್ಕಾರಗಳೊಂದಿಗೆ ಸದಾ ವಿದ್ಯಾರ್ಥಿ ಸ್ನೇಹಿ ಕಲಿಕಾ ಸಾಮಗ್ರಿಗಳನ್ನು ಒದಗಿಸುವಲ್ಲಿ ಮುಂಚೂಣಿಯಲ್ಲಿದೆ. ಇದು ತಂತ್ರಜ್ಞಾನ ಯುಗ. ಕಛೇರಿಯ ಕಡತಗಳಿಂದ ಹಿಡಿದು ಶಾಲಾ ಕಾಲೇಜುಗಳ ಬೋಧನಾ ಸಾಮಗ್ರಿಗಳೂ ಡಿಜಿಟಲ್‌ಮಯವಾಗುತ್ತಿವೆ.

ನಮ್ಮ ಕಾಲೇಜಿನಲ್ಲಿ ಇ–ಯುಗಕ್ಕೆ ಮುನ್ನುಡಿ

*ಇ–ಬುಲೆಟಿನ್‌ಗಳು:ಬರವಣಿಗೆ ವಿದ್ಯಾರ್ಥಿಗಳ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಒರೆಗೆ ಹಚ್ಚಲು ಅತ್ಯುತ್ತಮ ವೇದಿಕೆ. ವಿವಿಧ ವಿಭಾಗಗಳ ಭಿತ್ತಿಪತ್ರಿಕೆಗಳು ಇದಕ್ಕೆ ಕೈಗನ್ನಡಿ. ಇದನ್ನೇ ಡಿಜಿಟಲ್ ಆವೃತ್ತಿಯಲ್ಲಿ ತಂದರೆ ಹೇಗಿರುತ್ತದೆ? ಪರಿಸರಸ್ನೇಹಿ, ವಿಚಾರಪೂರ್ಣ ಹಾಗೂ ಕಡಿಮೆ ಖರ್ಚಾಗುವ ಒಂದು ಉತ್ತಮ ಯೋಚನೆ. ಈಗಾಗಲೇ ಪತ್ರಿಕೋದ್ಯಮ, ಭೌತಶಾಸ್ತ್ರ, ಕನ್ನಡ ಹಾಗೂ ಇತರೆ ವಿಭಾಗಗಳು ಇ– ಆವೃತ್ತಿಯನ್ನು ಹೊರತರುತ್ತಿವೆ.ಆಂಗ್ಲ ವಿಭಾಗದ ಲಿಟ್–ರೈಟ್ ಎಂಬ ಬ್ಲಾಗ್ ಕೂಡಾ ವಿಚಾರ ವಿನಿಮಯಕ್ಕೆ ಅವಕಾಶ ಒದಗಿಸುತ್ತದೆ.

* ಡಾಟಾ ಸೆಂಟರ್: ಇನ್ಮುಂದೆ ಕಾಲೇಜಿನ ಕಡತಗಳೆಲ್ಲವೂ ಈ ಡೇಟಾ ಸೆಂಟರ್‌ನಲ್ಲಿ ಕಡಿಮೆ ಸಮಯದಲ್ಲಿ ಲಭ್ಯವಾಗುತ್ತವೆ. ಇದ–ರಿಂದಾಗಿ ಸಮಯವೂ ಉಳಿತಾಯ ಹಾಗೂ ಕ್ಲಪ್ತ ಮಾಹಿತಿಗಳು ದೊರಕುತ್ತವೆ.




* ಇನ್ಮುಂದೆ ಹಾಜರಾತಿ ಅಂಗೈಯಲ್ಲಿ: ಹಾಜರಾತಿ ವ್ಯವಸ್ಥೆಯಲ್ಲೂ ಬದಲಾವಣೆ ತರಲಾಗಿದ್ದು ಪ್ರಾಧ್ಯಾಪಕರು ಮೊಬೈಲ್ ನಲ್ಲೇ ಅಟೆಂಡೆನ್ಸ್ ಹಾಕುವ ಪದ್ಧತಿ ಪ್ರಾರಂಭವಾಗಿದೆ. ಇನ್ನೂ ಸುಧಾರಿತ ಬದಲಾವಣೆಗಳನ್ನು ತಂದರೆ ಈ ವ್ಯವಸ್ಥೆ ಪರಿಣಾಮಕಾರಿ.

* ಆನ್‌ಲೈನ್ ಪರೀಕ್ಷೆ: ಕಳೆದ ವರ್ಷದಿಂದ ಬಿ.ಎ. ವಿದ್ಯಾರ್ಥಿಗಳು ಮೊದಲ ಇಂಟರ್ನಲ್ಸ್ ಪರೀಕ್ಷೆಯನ್ನು ಕಂಪ್ಯೂಟರ್ ನಲ್ಲಿ ಟೈಪಿಸುವ ಮೂಲಕ ಪರೀಕ್ಷೆ ಬರೆದಿದ್ದು ಹೊಸ ವ್ಯವಸ್ಥೆಗೆ ಮುನ್ನುಡಿ ಬರೆದಿದ್ದಾರೆ.

* ಗೂಗಲ್ ಕ್ಲಾಸ್ ರೂಂ: ಈ ವರ್ಷದಿಂದ ಬಹಳ ಯಶಸ್ವಿಯಾಗಿ ಗೂಗಲ್ ಕ್ಲಾಸ್ ರೂಂನ್ನು ವಿದ್ಯಾರ್ಥಿಗಳಿಗಾಗಿ ಪರಿಚಯಿಸಲಾಗಿದೆ. ವಿವಿಧ ಪ್ರಶ್ನೋತ್ತರಾವಳಿಗಳು, ಚಟುವಟಿ–ಕೆಗಳನ್ನು ನಿಡಲಾಗುತ್ತಿದೆ.

* ಸ್ಟೂಡೆಂಟ್ ಲೆಕ್ಚರ್ ಸಿರೀಸ್:ವಿದ್ಯಾರ್ಥಿಗಳು ತಾವು ಅಧ್ಯಯನ ಮಾಡಿದ ಯಾವುದೇ ವಿಷಯದ ಬಗ್ಗೆಯೂ ವಿಚಾರ ಮಂಡಿಸಲು ಇದು ಉತ್ತಮ ಅವಕಾಶ. ಎಸ್.ಡಿ.ಎಂ. ಮಲ್ಟಿಮೀಡಿಯಾ ಸ್ಟುಡಿಯೋ ವಿದ್ಯಾರ್ಥಿಗಳ ವಿಚಾರಗಳನ್ನು ವಿಡಿಯೋ ಮಾಡಿ ಯೂಟ್ಯೂಬ್ ಚಾನಲ್ನಲ್ಲಿ ಹರಿಬಿಡುತ್ತದೆ.

ಎಸ್.ಡಿ.ಎಂ. ಅವಕಾಶಗಳ ಸಾಗರ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗುವಂತಹ ಎಲ್ಲಾ ಅಂಶಗಳನ್ನು ತನ್ನಲ್ಲಿ ಅಳವಡಿಸಿಕೊಂಡಿದೆ. ಇದನ್ನು ಸದುಪಯೋಗಪಡಿಸಿಕೊಳ್ಳೋಣ.

– ರಶ್ಮಿ ಯಾದವ್ ಕೆ
II ಬಿ.ಎ

# 'ಅಭಿನಯ ಸಾಗರ'ದಲ್ಲಿ ಮಿಂದೆದ್ದ ರಂಗಾಧ್ಯಯನ ಕೇಂದ್ರ

'ಅಭಿನಯಸಾಗರ'.... ಈ ಹೆಸರೇ ನಮ್ಮನ್ನೆಲ್ಲ ಮೋಡಿ ಮಾಡಿತ್ತು. ಶಿವಮೊಗ್ಗದ ಸಾಗರದಲ್ಲಿ ನಡೆಯುವ ನಾಟಕ ಸ್ಪರ್ಧೆಯಲ್ಲಿ ನಾವು ಭಾಗಿಯಾಗಲಿದ್ದೇವೆ, ಅದನ್ನು ಅಭಿನಯಸಾಗರ ನಡೆಸಲಿದೆ. ಇವಿಷ್ಟೇ ನಮ್ಮ ಪೂರ್ವಜ್ಞಾನವಾಗಿತ್ತು. ಸಾಗರದ ನೆಲ ಭಾರತದಲ್ಲಿಯೇ ರಂಗಭೂಮಿಗೆ ಹೆಸರು ಮಾಡಿದ ಊರದು. ಅಲ್ಲಿ ನಾವು ಬಣ್ಣ ಹಚ್ಚಲಿದ್ದೇವೆ ಎಂಬುದೇ ನಮ್ಮ ಉತ್ಸಾಹಕ್ಕೆ ಕಾರಣವಾಗಿತ್ತು.

ನಮ್ಮ ಗುರು ಯಶವಂತ ಬೆಳ್ತಂಗಡಿ. ಅವರ ನಿರ್ದೇಶನದಲ್ಲಿ ಅಭಿನಯಸಾಗರದಲ್ಲಿ ಮುಳುಗಲು ವಿಶೇಷ ತರಬೇತಿ ದೊರೆಯಿತು. ಸುಮಾರು 10 ದಿನಗಳ ನಾಟಕ ತಾಲೀಮು ನಡೆಸಿ ಸಿದ್ದವಾದೆವು. ಜನವರಿ 30ರಿಂದ ಫೆಬ್ರವರಿ 1ರವರೆಗೆ ನಡೆಯುವ 3ದಿನಗಳ 'ಅಭಿನಯೋತ್ಸವ–2020'ಕ್ಕೆ ಒಂದು ದಿನ ಮೊದಲೇ ಹೋಗಿ ಬೇರೂರಿದೆವು.

ದಿನಾಂಕ 31–1–2020: ನಾಟಕ ಸ್ಪರ್ಧೆ ಪ್ರಾರಂಭವಾಯಿತು. ನಮ್ಮ ತಂಡಕ್ಕೆ ಅಭಿನಯಕ್ಕೂ ಮೊದಲು 'ಮಾತುಕತೆ'ಗೆ ಅವಕಾಶ ದೊರೆಯಿತು. ನಾಟಕದ ತಂಡವೊಂದು ಮತ್ತೊಂದು ತಂಡದ ನಾಟಕವನ್ನು ವೀಕ್ಷಿಸಿ ಅನಿಸಿಕೆ, ಮೆಚ್ಚುಗೆ ವ್ಯಕ್ತಪಡಿಸುವ ವೇದಿಕೆಯೇ 'ಮಾತುಕತೆ'. ವಿದ್ಯಾರ್ಥಿಗಳನ್ನು ಉತ್ತಮ




ವೀಕ್ಷಕರನ್ನಾಗಿಯೂ, ವಿಮರ್ಶಕರೂ, ಮಾತುಗಾರರನ್ನಾಗಿಯೂ ಮಾಡುವುದು 'ಮಾತುಕತೆ'ಯ ಉದ್ದೇಶವಾಗಿತ್ತು. ನಮ್ಮ ನಾಟಕ ಪ್ರದರ್ಶನದ ವೇಳೆ ಇಡೀ ಸಭಾಭವನ ನಿಶ್ಶಬ್ದವಾಗಿತ್ತು. ನಮ್ಮ ನಾಟಕ ಎಷ್ಟು ಯಶಸ್ವಿಯಾಯಿತೆಂದರೆ ಹೋದಲ್ಲಿ ಬಂದಲ್ಲಿ ಉಜಿರೆಯವರಲ್ಲವೇ!? ಎಂದು ಶ್ಲಾಘಿಸುವವರೇ ಕಾಣುತ್ತಿದ್ದರು. ನಮಗಂತೂ ಹಿಗ್ಗೋಹಿಗ್ಗು!.

ದಿನಾಂಕ 1–2–2020: ಸಮಾರೋಪ ಸಮಾರಂಭ. ಎಲ್ಲಾ ತಂಡಗಳಿಗೂ ಸ್ಮರಣಿಕೆ ನೀಡಿ, ನಂತರ ಫಲಿತಾಂಶ. ನಮ್ಮ ತಂಡಕ್ಕೆ ಶ್ರೇಷ್ಠ ನಿರ್ದೇಶಕ, ಉತ್ತಮ ಸಂಗೀತ ನಿರ್ದೇಶಕ ಎಂಬ ಎರಡು ವೈಯಕ್ತಿಕ ಪ್ರಶಸ್ತಿಗಳೂ ಬಂದವು. ಕಡೆಗೆ ಪ್ರಥಮ ಸ್ಥಾನವೂ ನಮ್ಮದೇ!! ಇಡೀ ಸಭಾಂಗಣ ಎಸ್.ಡಿ.ಎಂ. ಎಂದು ಒಕ್ಕೊರಲಿನ ಜಯಘೋಷ ಮೊಳಗಿಸಿತು.

'ಅಭಿನಯ ಸಾಗರ' ಒಂದು ಆದ–ರ್ಶಪ್ರಾಯವಾದ ಸಂಸ್ಥೆ. ಅದರ ಸದಸ್ಯರೆಲ್ಲರೂ ಸಾಗರದ ಯುವ ಸಮುದಾಯ. ಬೇರೆ ಬೇರೆ ಸ್ಥಳಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಂಡಿದ್ದವರು 'ಅಭಿನಯ ಸಾಗರ'ದಲ್ಲಿ ಒಂದುಗೂಡಿ ಅತಿಥಿಗಳನ್ನು ಪ್ರೀತಿಸಿದ ಪರಿ ನಿಜಕ್ಕೂ ಸ್ತುತ್ಯಾರ್ಹ. ವಸತಿ, ಊಟೋಪಹಾರ ವ್ಯವಸ್ಥೆಗೆ ಮರುಳಾಗದವರೇ ಇಲ್ಲ. ಒಟ್ಟಾರೆ ಅಭಿನಯೋತ್ಸವ–2020 ಒಂದು ಯಶಸ್ವಿ ಸಂಘಟನೆಯ ಯಶಸ್ವಿ ಕಾರ್ಯಕ್ರಮ.

–ಟಿ. ಎಸ್. ಕೃತಿಕಾರಾಣಿ
II ಬಿ.ಎ

# ‘ಮನ’ವ ಅರಿತು ‘ಶಾಸ್ತ್ರ’ವ ಹೇಳುವ ಪ್ರೀತಿಯ ಗುರುಗಳು

ಕಾಲೇಜಿನ ಮನಃಶಾಸ್ತ್ರ ವಿಭಾಗದ ಪುಟಗಳಲ್ಲಿ ಇವರದು ಮಾಸದ ಅಧ್ಯಾಯ. ಶಾಂತ, ಸರಳ ಸಜ್ಜನಿಕೆಯ ಪ್ರತೀಕವೇ ಇವರೆಂದು ಹೇಳಬಹುದು. ಮುಖದ ಮೇಲೊಂದು ಮಾಸದ ನಗು ಇವರದು. ಮನಃಶಾಸ್ತ್ರದ ಎಲ್ಲಾ ಆಯಾಮಗಳಲ್ಲೂ ಆಳವಾದ ಅಧ್ಯಯನ ನಡೆಸಿರುವ ಇವರು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚು. ತಮ್ಮ ಸುದೀರ್ಘ ವೃತ್ತಿಜೀವನವನ್ನು ಪ್ರೊ.ಗೋಪಾಲ ಪಟವರ್ಧನ್ ಸರ್, ಚಿಗುರು ತಂಡದೊಂದಿಗೆ ಹಂಚಿಕೊಂಡಿದ್ದು ಹೀಗೆ..



**1. ನಿಮ್ಮ ಬಾಲ್ಯ ಮತ್ತು ಶೈಕ್ಷಣಿಕ ಜೀವನ ಹೇಗಿತ್ತು?**

➢ ಬೆಳ್ತಂಗಡಿ ತಾಲೂಕಿನ ಮುಂಡಾಜೆ ಗ್ರಾಮದಲ್ಲಿ 12–11–1959ರಂದು ಜನನ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಳದ ಗುರುಕುಲ ಶಾಲೆಯಲ್ಲಿ ಪೂರೈಸಿದೆ.ನಂತರ ಮುಂಡಾಜೆಯಲ್ಲಿ ಪ್ರೌಢಶಾಲೆ ಮುಗಿಸಿ SDM ನಲ್ಲಿ ಪದವಿಪೂರ್ವ ಹಾಗೂ ಪದವಿ ಶಿಕ್ಷಣ ಮುಗಿಸಿದೆ. ಕೆಲಸ ಮಾಡಬೇಕೆಂಬ ಆದಮ್ಯ ಆಸೆ ಇದ್ದರೂ ಹಿರಿಯರ ಮಾರ್ಗದರ್ಶನದ ಅನುಸಾರ ಶಿಕ್ಷಣವನ್ನು ಮುಂದುವರೆಸಿದೆ. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ M.A ಮುಗಿಸಿದೆ. 2007 ರಲ್ಲಿ ಭಾರತೀಯಾರ್ ಯುನಿವರ್ಸಿಟಿಯಿಂದ M.Phil ಪೂರೈಸಿದೆ.

**2. ನಿಮ್ಮ ಅಭಿರುಚಿ, ಆಸಕ್ತಿಗಳೇನು?**

➢ ನಮ್ಮದು ಕೃಷಿ ಆಧಾರಿತ ಕುಟುಂಬ. ಹಾಗಾಗಿ ಮೊದಲಿನಿಂದಲೇ ಕೃಷಿಯ ಬಗ್ಗೆ ಆಸಕ್ತಿ ಜಾಸ್ತಿ. ಕಾರ್ಯನಿಮಿತ್ತ ಉಜಿರೆಯಲ್ಲಿ ವಾಸುಸಿತ್ತಿದ್ದೇನೆಯಾದ್ದರಿಂದ ಈಗ ವಾರಕ್ಕೆ ಒಂದು ಬಾರಿಯಾದರೂ ಮುಂಡಾಜೆಯ ಮನೆಗೆ ಹೋಗಿ ತೋಟದ ಉಸ್ತುವಾರಿ ಮುಂತಾದವುಗಳನ್ನೆಲ್ಲಾ ನೋಡಕೊಳ್ಳುತ್ತೇನೆ.

**3. ನಿಮ್ಮ ಸುದೀರ್ಘ ವೃತ್ತಿ ಜೀವನದ ಬಗ್ಗೆ ತಿಳಿಸಿ**

➢ ಮೊದಲಿಗೆ ಮಂಗಳೂರಿನ College of Fisheries ನಲ್ಲಿ ವೃತ್ತಿಜೀವನವನ್ನು ಆರಂಭಿಸಿದೆ. ನಂತರ 2 ವರ್ಷ National Council for Applied Economic Research ನಲ್ಲಿ ಕೆಲಸ ಮಾಡಿದೆ. ಮುಂಡಾಜೆಯ ಪದವಿಪೂರ್ವ ಕಾಲೇಜಿನಲ್ಲಿ 1991–1997 ರ ತನಕ, 7 ವರ್ಷಗಳ ಕಾಲ ಸೇವೆ ಸಲ್ಲಿಸಿದೆ. 1997ರಲ್ಲಿ S.D.M ಕಾಲೇಜಿನಲ್ಲಿ ಅಧ್ಯಾಪಕನಾಗಿ ಸೇರಿದೆ.

**4. S.D.M ಜರ್ನಿ ಹೇಗಿತ್ತು?**

➢ ನನ್ನದೇ ಗುರುಗಳ ಜೊತೆ ಕೆಲಸ ಮಾಡುವ ಅಪೂರ್ವ ಅವಕಾಶ ನನ್ನದಾಗಿತ್ತು. 2007ರಲ್ಲಿ HOD ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನಮ್ಮದು ಬಹಳ ಒಳ್ಳೇ ಡಿಪಾರ್ಟ್ಮೆಂಟ್ . ಇದು ಕೇವಲ ನನ್ನಿಂದಲ್ಲ. ನನ್ನ ಸಹವರ್ತಿಗಳೂ ಬಹಳ ಕೋಆಪರೇಟೀವ್ ಇದ್ದಾರೆ. ಹಾಗಾಗಿ SDM ಜರ್ನಿ ಬಹಳ ಸುಲಭವಾಗಿ, ಸುರಳೀತವಾಗಿ ಇತ್ತು. ಇಲ್ಲಿ ಕಲಿಸಿದ್ದೂ, ಕಲಿತಿದ್ದೂ ಬಹಳ. ಮುಖ್ಯವಾಗಿ ತಾಳ್ಮೆಯಿಂದಿರಲು ಕಲಿತಿದ್ದೇನೆ.

**5. ಸೈಕಾಲಜಿಯ ಬಗ್ಗೆ ಏನು ಹೇಳಲು ಇಚ್ಛಿಸುತ್ತೀರ?**

➢ ನನ್ನ ಪ್ರೈಮರಿ ಫೀಲ್ಡ್ ಸೈಕಾಲಜಿ. ಇದನ್ನು ಕೇವಲ ಸಬ್ಜೆಕ್ಟ್ ಎಂದು ಗ್ರಹಿಸಿದೆ ನಮ್ಮಬದುಕಿನ ಒಂದು ರೀತಿ ಎಂದು ತಿಳಿದು ಬದುಕಿದರೆ ಉತ್ತಮ. ನಮ್ಮ ಜೀವನ ಶೈಲಿಯನ್ನು ಇನ್ನೂ ಉತ್ತಮಗೊಳಿಸಲು, ಮಾನಸಿಕ ಸಮಾಧಾನ ಪಡೆಯಲು ಇದು ಅತ್ಯಂತ ಪೂರಕ. ಮೊದಲೆಲ್ಲಾ ಮನಃಶಾಸ್ತ್ರದ ಬಗ್ಗೆ ಪೂರ್ವಾಗ್ರಹಗಳೇ ಜಾಸ್ತಿ ಇದ್ದವು. ಈಗೀಗ ಜನರಲ್ಲಿ ಇದರ ಬಗೆಗೆ ತಿಳುವಳಿಕೆ ಮೂಡುತ್ತಿದೆ. ಇದೊಂದು ಒಳ್ಳೆಯ ಬೆಳವಣಿಗೆ.

**6. ವಿದ್ಯಾರ್ಥಿಗಳಿಗೆ, ಯುವಜನತೆಗೆ ಏನು ಸಂದೇಶ ಕೊಡುತ್ತೀರ?**

➢ ಕಲಿಯುವುದೆಂದರೆ ಕೇವಲ ಅಂಕಗಳಿಕೆಗಾಗಿ ಮಾತ್ರ ಅಲ್ಲ, ನಮ್ಮನ್ನು ನಾವೇ ಸ್ವತಃ ಅರಿಯುವುದಕ್ಕಾಗಿ ತನ್ಮೂಲಕ ಜೀವನದಲ್ಲಿ ಏಳ್ಗೆಯನ್ನು ಹೊಂದುವುದಕ್ಕಾಗಿ. ಹಾಗಾಗಿ ಬದುಕಲು ಕಲಿಯಿರಿ .

**7. ನಿವೃತ್ತ ಜೀವನದ ಪ್ಲಾನ್ ಏನಿದೆ?**

➢ ಕೃಷಿಯಲ್ಲಿ ಆಸಕ್ತಿಯಿರುವುದರಿಂದ ಆದಷ್ಟು ಸಮಯ ಅದಕ್ಕೆಂದೇ ಮೀಸಲಿಡುವ ಯೋಚನೆಯಿದೆ. ಹಾಗೆಯೇ ಕೌನ್ಸೆಲಿಂಗ್ ಕೂಡ ಮುಂದುವರೆಸುವ ಇರಾದೆಯಿದೆ.

– ಗೌತಮಿ ಕಾಕತ್ಕರ್, ಅನುಪಮ ಶಾಸ್ತ್ರಿ
III ಬಿ.ಎ

## CAMPUS RECRUITMENT DRIVE 2019-2020

| NAME OF THE COMPANY | NO.OF SELECTED STUDENTS |
|---|---|
| INFOSYS LTD | 49 |
| INFOSYS BPM | 21 |
| COGNIZANT | 15 |
| FACE | 5 |
| NANDI TOYOTA | 54 |
| KOTAK MAHINDRA | 10 |

## ಶೈಲೇಶ್ ಕುಮಾರ್‌ಗೆ ಪ್ರಶಸ್ತಿ



Libs ಫೌಂಡೇಶನ್ ವತಿಯಿಂದ ನೆಡೆಸಿದ ಮೊದಲ ಅಂತರಾಷ್ಟ್ರೀಯ ವ್ಯಂಗ್ಯ ಚಿತ್ರ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ಕಂಪ್ಯೂಟತಿರ್ ಸೈನ್ಸ್ ವಿಭಾಗದ ಪ್ರೊ ಶೈಲೇಶ್ ಕುಮಾರ್ ಸರ್‌ರವರು ಭಾಗವಹಿಸಿದ್ದು “ಅಪ್ರಿಸಿಯೇಷನ್ ಅವಾರ್ಡ್” ಪಡೆದಿರುತ್ತಾರೆ. ಅವರಿಗೆ ಚಿಗುರು ತಂಡದ ಪರವಾಗಿ ಧನ್ಯವಾದಗಳು.

# ಜಾಹಿರಾತುಗಳೋ ಜಾದುಲೋಕವೋ

ಪಾಂಡ, ಅಬ್ಬಬ್ಬಾ,ಎಂತಹ ಪ್ರಾಣಿ. ಅತ್ತ ಪಾಂಡ ಬಣ್ಣ ಬಣ್ಣಗಳ ಜೆಮ್ಸ್ ತಿಂದು ಆಸ್ವಾದಿಸಿದ ತಕ್ಷಣ ಮನೆಯಲ್ಲಿ ಮಕ್ಕಳ ರಂಪಾಟ ಶುರುವಾಗಿಯೇ ಬಿಡುತ್ತದೆ. ಯಾವುದೋ ತಾರೆ ತೆರೆ ಮೇಲೆ ಯಾವುದೋ ಸಾಬೂನನ್ನು ಪ್ರಚಾರ ಮಾಡಿದರೆ ಇತ್ತ ಕಾಲೇಜು ಹುಡುಗಿಯರು ಅದರ ಖರೀದಿಗಾಗಿ ಅಂಗಡಿ ಮುಂದೆ ಸಾಲುಗಟ್ಟಿ ನಿಲ್ಲುತ್ತಾರೆ. ನಮ್ಮ ಜಗತ್ತು ಜಾಹಿರಾತಿನಿಂದ ಪ್ರಭಾವಿತವಾಗಿರುವ ಕ್ರೇಜಿ ಜಗತ್ತು. ಇಂದಿನ ಜಮಾನ ನಿಂತಿರುವುದೇ ಜಾಹಿರಾತುಗಳಿಂದ.ಟಿವಿ ಪರದೆ ಮೇಲೆ ಸೊಗಸಾಗಿ ಬಿತ್ತರವಾಗುವ ಸೆಕೆಂಡ್‌ಗಳ ತುಣುಕಿಗೆ ಇಡೀ ಜಗತ್ತನ್ನೇ ಮರುಳಾಗಿಸುವ ಶಕ್ತಿಯಿದೆ. ಜಾಹೀರಾತಿನ ವಿಶೇಷತೆಯೇ ಅಂಥದ್ದು. ಜಾಹೀರಾತುಗಳ ಜಾದು ಲೋಕದೊಳಗೆ ಕಾಲ್ಜಾರಿ ಬೀಳುವ ಮುನ್ನ ಒಂದು ಕ್ಷಣ ಯೋಚಿಸಬೇಕಿದೆ. ಪ್ರತಿ ನಿತ್ಯ ಟಿವಿಯಲ್ಲಿ ನೋಡುವ ಜಾಹೀರಾತುಗಳ ಬಗ್ಗೆ ಮೆಲುಕು ಹಾಕೋಣ. ಟಿವಿಯಲ್ಲಿ ಕಾಣಿಸಿಕೊಳ್ಳುವವರು ಒಂದೇ ಒಂದು ಬಾರಿ ಸರ್ಫ್ ಎಕ್ಸೆಲ್, ರಿನ್ ಮಿಶ್ರಿತ ನೀರಿನಲ್ಲಿ ಜಡೀ ಮಣ್ಣಾಗಿರುವ ಶರ್ಟನ್ನು ಅದ್ದಿ ತೆಗೆದರೆ ಸಾಕು, ಕೊಳೆಯಲ್ಲಾ ಮಾಯ. ಕೊಳೆಯಷ್ಟೇ ಅಲ್ಲ




ಅಂಗಿಯೇ ಮಾಯವಾದವೂ ಅಚ್ಚರಿಯಿಲ್ಲ. ವಾಸ್ತವದಲ್ಲಿ ಅದು ಸಾಧ್ಯವೇ. ಟಿವಿಯಲ್ಲಿ ನಡೆಯುವ ಜಾದೂ ಪ್ರತಿ ಮನೆಯಂಗಳದಲ್ಲೂ ನಡೆದು ಬಿಟ್ಟಿದ್ದರೆ ಪ್ರಪಂಚ ಸ್ವರ್ಗಕ್ಕಿಂತ ಕಮ್ಮಿಯೇನಿರುತ್ತಿರಲಿಲ್ಲ. ಮತ್ತೆ ಮನುಷ್ಯ ಊಹಿಸಲು ಸಾಧ್ಯವಾಗದ ತರ್ಕಗಳು ಕಂಡುಬರುತ್ತವೆ. ಇನ್ನು ಹುಡುಗಿಯರ ವಿಷಯಕ್ಕೆ ಬರೋದಾದರೆ, ಪರದೆಯ ಮೇಲೆ ಯಾವುದೋ ಸೌಂದರ್ಯ ವರ್ಧಕದಿಂದ ತತ್‌ಕ್ಷಣದಲ್ಲಿ ಫಳಫಳನೆ ಮಿಂಚುವ ಚೆಲುವೆ ನಿಜವಾಗಿ ಹೇಗಿದ್ದಾಳೆ! ಯಾರು ಬಲ್ಲರು. ಅಷ್ಟಕ್ಕೂ ಆಕೆಯ ಮೊಗದ ಕಾಂತಿಯ ಹಿಂದೆ ಕ್ಯಾಮರಾ ಲೈಟ್‌ಗಳ ಕೈಚಳಕವಿರುತ್ತದೆ. ಹೀಗಿದೆ ಜಾಹಿರಾತು ಜಗತ್ತಿನ ಕಥೆ. ಪರದೆಯ ಮೇಲೆ ಬಣ್ಣ ಹಚ್ಚಿದವರಿಗೆ ಕಿಸೆಯ ತುಂಬ ಹಣ ಸಿಗುತ್ತದೆ. ತೆರೆಯ ಹಿಂದೆ ಜಾದು ಸೃಷ್ಟಿಸಿದವರಿಗೂ ಬೊಗಸೆ ತುಂಬ ಸಿಕ್ಕಿರುತ್ತದೆ. ಅವರೆಲ್ಲರ ಜೇಬು ತುಂಬಿಸುವ ಜನರಿಗೆ ಏನು ಸಿಗುತ್ತದೆ ಎಂದು ಕ್ಷಣಕಾಲ ಯೋಚಿಸಬೇಕಿದೆ. ಕ್ಯಾಮರಾ ಕೈಚಳಕದಲ್ಲಿ ನಡೆದದ್ದು ಜೀವನದಲ್ಲೂ ಯಥಾವತ್ ನಡೆದು ಬಿಡುತ್ತಿದ್ದರೆ ಅದಕ್ಕಿಂತ ಸಂತೋಷ ಮತ್ತೊಂದಿಲ್ಲ. ಜಾಹೀರಾತುಗಳ ಕಟು ಸತ್ಯಗಳನ್ನು ನಾವು ಅರ್ಥೈಸಿಕೊಳ್ಳಬೇಕಿದೆ. ಜಾಹೀರಾತನ್ನು ಜೀವನದಲ್ಲಿ ಕಾರ್ಯರೂಪಕ್ಕೆ ತರುವ ಮುನ್ನ ಎಚ್ಚರವಿರಬೇಕು.

ಹಾಗಂತ ಜಾಹೀರಾತುಗಳನ್ನು ತೆಗೆದು ಹಾಕಲು ಸಾಧ್ಯವಿಲ್ಲ. ವ್ಯಾಪಾರವೆಂಬುದು ನಮ್ಮ ಸಮಾಜದ ಆಧಾರ ಸ್ಥಂಬವಿದ್ದಂತೆ. ಎಷ್ಟೋ ವಸ್ತುಗಳು ಖರೀದಿಗೆ ಅರ್ಹವಾಗಿರುವುದು ನಿಜ. ಅದರಿಂದ ಎಷ್ಟೋ ಜನರ ಹೊಟ್ಟೆ ತುಂಬುತ್ತಿದೆ ನಿಜ. ಆದರೂ ಅಂಧರಂತೆ ಕಣ್ಣ್ ಸೆಳೆದದ್ದನ್ನೆಲ್ಲಾ ಖರೀದಿಸುವುದು ತರವಲ್ಲ. ಜಾಹಿರಾತು ಲೋಕಕ್ಕೆ ಜಾರುವ ಮುನ್ನ ಆಲೋಚಿಸಿ!

– ಪ್ರಗತಿ ಕೌಂಡಿನ್ಯ
III ಬಿ.ಎ

# ಒಳ್ಳೆಯ ಹವ್ಯಾಸ ಮತ್ತು ನಾವು



ವಿದ್ಯಾರ್ಥಿ ಎಂದರೆ ಯಾರು? ಇದೊಂದು ಸಂಸ್ಕೃತ ಪದ. ವಿದ್ಯಾಯಾ ಅರ್ಥಿ ಎಂದು ಇದನ್ನು ಬಿಡಿಸಿಹೇಳುವುದುಂಟು. ವಿದ್ಯೆಯನ್ನು ಸಂಪಾದಿಸುವುದೇ ಈತನ ಮುಖ್ಯ ಗುರಿಯಾಗಿರುತ್ತದೆ. ಹಾಗಾದರೆ ವಿದ್ಯೆ ಎಂದರೆ ಯಾವುದು? ಅರವತ್ತೆಂಟು ಕೋಟಿ ವಿದ್ಯೆಗಳನ್ನು ಅನೇಕಾನೇಕ ಗ್ರಂಥಗಳು ಹೇಳುತ್ತವೆ. ಅಕ್ಷರ ವಿದ್ಯೆಗಳು ಮಾತ್ರ ವಿದ್ಯೆಯಲ್ಲ, ಸಮಾಜದಲ್ಲಿ ಆರೋಗ್ಯಕರವಾದ ಬದುಕಿಗೆ ಏನೆಲ್ಲಾ ಬೇಕು, ಇಂದಿನ ಸದ್ಯದ ಸ್ಥಿತಿಯಲ್ಲಿ ಸಮಾಜದಲ್ಲಿ ವಿದ್ಯಾರ್ಥಿಯು ವಿದ್ಯಾರ್ಥಿಯಾಗಿಯೇ ಉಳಿಯುವುದರಲ್ಲಿಯೇ ಸ್ವಾರಸ್ಯವಿದೆ. ಆಗ ಬರಿ ಪಶ್ಚಾತ್ತಾಪವಷ್ಟೆ! ಪೂರ್ವಕಾಲದಲ್ಲಿ ಈಗಿನಂತಹ ಪರಿಸ್ಥಿತಿ ಇರಲಿಲ್ಲ. ಶಿಷ್ಯರು ಗುರುವಿನ ಸಾನಿಧ್ಯದಲ್ಲಿ ಕುಳಿತು ಅಭ್ಯಸಿಸುತ್ತಿದ್ದರು. ಹೆಚ್ಚಾಗಿ ಅವರಿಗೆ ಶಸ್ತ್ರಾಸ್ತ್ರಗಳ ಪ್ರಯೋಗಗಳನ್ನು ಹೇಳಿಕೊಡುತ್ತಿದ್ದರು. ಅಂದು ಶಿಷ್ಯರು ಯಾವ ರೀತಿ ಅಭ್ಯಸಿಸುತ್ತಿದ್ದರೆಂದು ಬಾಣನ ಕಾದಂಬರಿಯಿಂದ ತಿಳಿಯಬಹುದು. ಶುಕನಾಸ ಮಂತ್ರಿಯು ಮಹಾ ಪಂಡಿತ. ಲೋಕದ ಅನುಭವ ತಿಳಿದವನು. ಅವನು ರಾಜಕುಮಾರ ಚಂದ್ರಾಪೀಡನಿಗೆ ಉಪದೇಶಿಸಿದ್ದು ಮಾದರಿ ಎನ್ನಬೇಕು. ಅವನು ಅರಸೊತ್ತಿಗೆಯ ಮಬ್ಬನ್ನೊ, ಲಕ್ಷ್ಮಿಯ ಪ್ರಭಾವದಿಂದ ಬೇಕಾದ ಅನರ್ಥಗಳಾಗುವುದರಿಂದ ರಾಜಕುಮಾರರು ಅದನ್ನು ನಂಬಬಾರದೆಂದು ಹೇಳಿದ್ದಾನೆ. ಪ್ರಭುತ್ವ, ಅವಿವೇಕ ಇವುಗಳೆಲ್ಲವನ್ನು ಮೀರಿನಿಂದು ಜ್ಞಾನಾರ್ಜನೆಗೆ ತೊಡಗುವುದೇ ನಿಜವಾದ ವಿದ್ಯಾರ್ಥಿಯ ಲಕ್ಷಣ .ವಿದ್ಯಾರ್ಥಿಯು ಸುಖವನ್ನು ಬಿಡಬೇಕು ಇಲ್ಲವಾದರೆ ಸುಖಾರ್ಥಿಯು ವಿದ್ಯೆಯನ್ನು ಬಿಡಬೇಕು. ವಿದ್ಯಾರ್ಥಿಗಳು ಬಿಡುವಿನ ವೇಳೆಯನ್ನು ಸದುಪಯೋಗಪಡಿಸಿಕೊಳ್ಳಲು, ಆಗ ಎಂದಿಗೂ ನಮ್ಮ ಬುದ್ದಿ ನಮ್ಮ ಹಿಡಿತದಲ್ಲಿಯೇ ಇರುತ್ತದೆ. ಹಾಗೆ ವಿದ್ಯಾರ್ಥಿಯಾದವನಿಗೆ ಒಂದು ಒಳ್ಳೆಯ ಹವ್ಯಾಸ ಎನ್ನುವುದು ಇರಬೇಕು. ಈ ಹವ್ಯಾಸಗಳೆಂದರೆ ಬೇರೆಯೇನಲ್ಲ. ತಮ್ಮ ಮಾನಸಿಕ ಸಂತೋಷಕ್ಕಾಗಿ ಕೈಗೊಳ್ಳುವ ಕಾರ್ಯಗಳೇ ಹವ್ಯಾಸಗಳು, ಹವ್ಯಾಸಗಳು ವ್ಯಕ್ತಿಯ ಬೆಳವಣಿಗೆ ಪೂರಕವಾಗಿದ್ದರೆ, ಉತ್ತಮ ವ್ಯಕ್ತಿಗತ ಹವ್ಯಾಸಗಳಲ್ಲಿ ಮನುಷ್ಯನಿಗೆ ನೆಮ್ಮದಿ ಸಿಗುವಂತಹ ಹವ್ಯಾಸಗಳನ್ನು ಸಮಾಜ ಪ್ರೋತ್ಸಾಹಿಸುತ್ತದೆ. ವಿದ್ಯಾರ್ಥಿಯಾದವನು ತನ್ನ ಅಭ್ಯಾಸದ ಜೊತೆಗೆ ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಂಡರೆ, ಅದು ಅವನ ಉತ್ತಮ ಭವಿಷ್ಯತ್ತಿಗೆ ನಾಂದಿಯಾಗುತ್ತದೆ. ಹಾಗೆಯೇ ಉತ್ತಮ. ಹವ್ಯಾಸಗಳನ್ನು ಬೆಳೆಸಿಕೊಂಡು ಸದ್ಗುಣಗಳನ್ನು ರೂಢಿಸಿಕೊಂಡು ಲೋಕಮಾನ್ಯರಂತೆ ನಾಡು–ನುಡಿಗಳ ಪ್ರೇಮವನ್ನು ಉಜ್ವಲವಾಗಿಸಿಕೊಂಡು ಆದರ್ಶವಾದ ಬಾಳು ಬಾಳಿದರೆ, ಆಗಲೇ ಸಾರ್ಥಕ ಬದುಕು ನಮ್ಮದಾಗುತ್ತದೆ.

– ಮಧುರಾ ಎಲ್ ಭಟ್ಟ
III ಬಿ.ಎ

# ಬಾನೆತ್ತರಕ್ಕೆ ಡ್ರೋನ್ ಹಾರಿಸಿದ DRONE ಚಾರ್ಯ

ಮಂಡ್ಯದಿಂದ ಎಲ್ಲರ ಮೈಂಡ್‌ಗೂ ರೀಚಾದ ಯುವ ವಿಜ್ಞಾನಿಯ ಸಾಧನೆ ಅಪಾರ. 120 ದೇಶಗಳ ಪೈಕಿ 2800 ಸ್ಪರ್ಧಿಗಳ ಹಿಂದಿಕ್ಕಿ ನಮ್ಮ ನವಭಾರತವನ್ನು ಮೊದಲನೇ ಸ್ಥಾನಕ್ಕೆ ತಂದವರು .ನಮ್ಮ ಡ್ರೋನ್ ಪ್ರತಾಪ್ ಅವರ ಜೊತೆಗಿನ ಸಂದರ್ಶನದ ಪಕ್ಷಿನೋಟ.



1) ಮಂಡ್ಯ ಟು ಜಪಾನ್ ಹೇಗಿತ್ತು ಜರ್ನಿ ?

➢ ನನಗೆ ಆ ಕಾಂಪಿಟೇಷನ್ನಲ್ಲಿ ಭಾಗವಹಿಸಬೇಕು ಅಂತ ತುಂಬಾ ಆಸೆಯೇನೋ ಇತ್ತು, ಅದಕ್ಕೆ ತಕ್ಕ ಪರಿಶ್ರಮ ಸಹ ಪಟ್ಟಿದ್ದೆ .ನಾನು ಅದಕ್ಕೆ ಸೆಲೆಕ್ಟ್ ಆದೆ ಎಂಬ ಕ್ಷಣ ಅವತಿಂದ ಇನ್ನು ಹೆಚ್ಚು ಪರಿಶ್ರಮ ಪಟ್ಟು ಕೆಲಸ ಮಾಡಲು ಶುರು ಮಾಡಿದೆ. ಅದರಲ್ಲೂ ನಾನು ದೇಶವನ್ನು ಪ್ರತಿನಿಧಿಸುತ್ತಿದ್ದೇನೆ ಎಂದು ತಿಳಿದು ಇನ್ನೂ ಸಂತೋಷವಾಯಿತು.

2) ಪ್ರತಾಪ್, ಈಗ ಮನೆ ಮನೆಮಾತಾಗಿದ್ದೀರ ಇದರ ಬಗ್ಗೆ ನಿಮ್ಮ ಅಭಿಪ್ರಾಯ

➢ ಈ ಪ್ರೀತಿ ಈ ಜನಗಳು ಕೊಟ್ಟಿರೋ ಆಶೀರ್ವಾದವೇ ಇನ್ನೂ ಮತ್ತಷ್ಟು ಬಲ ಬಂದಿದೆ ನನಗೆ ಇನ್ನು ಮುಂದಿನ ಸಾಧನೆಗಳಿಗೆ ಇದುವೇ ನನಗೆ ಪ್ರೇರಣೆ.

3) ಬಡತನನ, ಸಿರಿತನದ ಹಾಗೂ ಅಚೀವ್ಮೆಂಟ್ ಇದರ ಬಗ್ಗೆ

➢ ಬಡತನ ಸಿರಿತನ ಅನ್ನುವುದೆಲ್ಲಾ ಸುಳ್ಳು, ಸಾಧನೆ ಮಾಡುವುದಕ್ಕೆ ಯಾವುದೇ ವರ್ಗ ಅಡ್ಡಿಯಾಗುವುದಿಲ್ಲ. ಸಾಧನೆಗೆ ಛಲ ಮತ್ತು ಆತ್ಮವಿಶ್ವಾಸ ಎರಡು ತುಂಬಾ ಮುಖ್ಯವಾಗುತ್ತದೆ .ಅಚೀವ್ಮೆಂಟ್ ಇದನ್ನೆಲ್ಲ ಮೀರಿ ನಿಂತು ಮೊದಲನೆ ಸ್ಥಾನಕ್ಕೆ ಬರುತ್ತದೆ.

4) ಎಸ್.ಡಿ.ಎಂ ಬಗ್ಗೆ ನಿಮ್ಮ ಅಭಿಪ್ರಾಯ.

➢ ಎಲ್ಲದಕ್ಕಿಂತ ಹೆಚ್ಚಾಗಿ ಸಂಸ್ಕಾರ ಇದೆ ಇಲ್ಲಿ .ಅದನ್ನ ಹಾಗೆ ಉಳಿಸಿದರೆ ಇನ್ನೂ ಒಳ್ಳೆಯದು .ರ್‍ಯಾಂಕಿಗ್ ಪ್ಲೇಸ್ಮೆಂಟ್ಸ್ ಎಲ್ಲ ಇನ್ಸ್ಟಿಟ್ಯೂಷನ್ ಸಹ ಕೊಡುತ್ತಾರೆ, ಆದರೆ ಸಂಸ್ಕಾರ ಅದಕ್ಕೆ ಒಂದು ಪಟ್ಟು ಮೇಲೆ ಇರುತ್ತದೆ ಎಸ್.ಡಿ.ಎಂ.

5) ಯುವಕರಿಗೆ ಈ ಚಿಗುರು ಮೂಲಕ ನಿಮ್ಮ ಸಂದೇಶ

➢ ನಿಮ್ಮನ್ನ ಈ ಸೊಸೈಟಿ ನಂಬದಿರಬಹುದು, ನಿಮ್ಮನ್ನ ನಿಮ್ಮ ಫ್ರೆಂಡ್ಸ್ ನಮ್ಮದೇ ಇರಬಹುದು, ಕೊನೆಗೆ ನಿಮ್ಮನ್ನ ನಿಮ್ಮ ಅಪ್ಪ ಅಮ್ಮನು ಕೈಬಿಡಬಹುದು, ನಮ್ಮಲ್ಲಿ ನಾವು ನಂಬಿಕೆ ಇಟ್ಟು ಜೀವನ ಮಾಡಿದ್ರೆ ಯಶಸ್ಸು ನಿಮ್ಮ ಜೊತೆ ಇರುತ್ತೆ .

– ಶಾಂತ್‌ಕುಮಾರ್ ಡಿವಿಜಿ, ವಿಕ್ರಮ್ ಹೆಗ್ಗಡೆ

---

## ಗೋಲ್ಡನ್ ಲೈಫನ್ನು ಗೋಡೋನ್ ಲೈಫ್ ಆಗಿಸದಿರಿ

ಇಂದಿನ ಮಕ್ಕಳೇ ಮುದಿನ ಪ್ರಜೆಗಳು ಅನ್ನೋ ಮಾತನ್ನ ನಾವೆಲ್ಲ ಚಿಕ್ಕವ ರಾಗಿನಿಂದ ಕೇಳುತ ಬಂದಿದ್ದೇವೆ. ಆದ್ರೆ ಈಗ ಪ್ರಜೆಗಳಾಗೋ ಹೊತ್ತಿಗೆ ಪ್ರಜೆಗಳೇನೋ ಅಗ್ತೇವೆ ಆದ್ರೆ ಯಾವ ರೀತಿಯ ಪ್ರಜೆಗಳು ಅನ್ನೋ ಪ್ರಶ್ನೆ ಕಾಡ್ಲಿಕ್ಕೆ ಶುರು ಆಗಿದೆ, ಕಾರಣ ಇಷ್ಟೆ jobless graduate ಎಂಬ ಭಾರತಕ್ಕೆ ಪರಿಚಿತ ವಿಶ್ವಕ್ಕೆ ಅಪರಿಚಿತ ಪದ.




ವರ್ಷದಿಂದ ವರ್ಷಕ್ಕೆ ಪದವಿ ಪಡೆದುಕೊಳ್ಳುವ ವರ ಸಂಖ್ಯೆ ಆಕಾಶಕ್ಕೆ ರಾಕೆಟ್ ಬಿಟ್ಟ ಅಷ್ಟು ಸ್ಪೀಡ್ ಆಗಿ ಹೆಚ್ಚಾಗುತ್ತಿದೆ. ಆದರೆ ಅದ್ರಲ್ಲಿ ಉದ್ಯೋಗ ಪಡೆದುಕೊಳ್ಳುವ ವರ ಪ್ರಮಾಣ ಮಾತ್ರ ಆಮೆ ನಡಿಗೆಗಿಂತ ಸ್ಲೋ ಆಗಿಬಿಟ್ಟಿದೆ. ಡಿಗ್ರೀ ಇದ್ರೆ ಸಲ್ಲಲ್ಲ ಕೌಶಲ್ಯ ನು ಇರಬೇಕಾಗಿದೆ. ಅರ್ಥಶಾಸ್ತ್ರ ದಲ್ಲಿ ಹೇಳೋದಾದ್ರೆ demand ಅಂತು ಇದೆ supply ಕೂಡ ಇದ್ರೆ ಆದ್ರೆ ಇಲ್ಲಿ ಕ್ವಾಲಿಟಿ demand ಕ್ವಾಲಿಟಿ supply ಇಲ್ಲ ಅನ್ನೋದೇ ಸಮಸ್ಯೆ.

ಅಂತೂ ಈ ಸಮಸ್ಯೆಗೆ ನಾನು ಸಿಕ್ಕಾಕೊಳ್ಳೋ ಪರಿಸ್ಥಿತಿ ತುಂಬಾ ದೂರ ಏನಿಲ್ಲ ಅಂತ ಅನಿಸ್ತಿದೆ. ಕಾಲೇಜು ಜೀವನದ ಗೋಲ್ಡನ್ ಲೈಫ್ ಮತ್ತೆಂದೂ ಜೇವನದಲ್ಲಿ ಮರುಕಳಿಸಲ್ಲ ಅಂತ ಸುತ್ತಿ, ತಿರುಗಿ, ಕುಣಿದು ಕುಪ್ಪಳಿಸಿ ಸಂಭ್ರಮಿಸಿ ಮುಗಿಸೋ ಕಾಲ ತುಸು ಹತ್ತಿರದಲ್ಲಿ ಇದ್ದಾಗಲೇ ಕಾಡ್ತಿರೋ ಒಂದೇ ಒಂದು ಪ್ರಶ್ನೆ ಡಿಗ್ರಿ ಮುಗೀತು ಮುಂದೇನು? (, ಅಥವಾ .) ಅಂತ. (ಪಿಜಿ), ಅಂದ್ರೆ ಎರಡು ವರ್ಷ ಪ್ರಶ್ನೆಯಿಂದ ಪರಾರಿ ಅಷ್ಟೆ ಇಲ್ಲ (.) ಅಂದ್ರೆ ಸಾಕು ಪ್ರಶ್ನೆನೇ ಎಲ್ಲ ಉತ್ತರಾ ಇಲ್ಲಾ ಅಂತ ಹಾಡ್ತಾ, ಗೋಲ್ಡನ್ ಲೈಫ್ ಗೆ ಟಾಟಾ ಬೈ ಬೈ ಹೇಳಿ ಸಾಧನೆಯ ಲೈಫ್‌ನತ್ತ ಹೆಜ್ಜೆ ಹಾಕಬೇಕು.

ಗೋಲ್ಡನ್ ಲೈಫ್ ಶೋಕಿ ಮಾತ್ರವಾಗಿದ್ರೆ ಮುಂದಿನ ಜೀವನ ಗೋಡೋನ್ ಆಗೋದ್ರಲ್ಲಿ ಸಂದೇಹನೆ ಬೇಡ...

– ಮಣಿಕಂಠ
III ಬಿ.ಎ

## ಪ್ರತಿಭೆಗೆ ಸಂದ ರಾಷ್ಟ್ರೀಯ ಸೇವಾರತ್ನ



ಜಗದೀಶ್ ಬಳಂಜ ಇವರು ಬೆಳ್ತಂಗಡಿ ತಾಲೂಕು ಬಳಂಜ ಗ್ರಾಮದ ಸಂಜೀವ ಪೂಜಾರಿ ಮತ್ತು ವಿಮಲ ದಂಪತಿಗಳ ಪುತ್ರನಾಗಿದ್ದು ಪ್ರಸ್ತುತ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವಿದ್ಯಾಲಯದಲ್ಲಿ ಬಿ.ಎಸ್ಸಿ ಪದವಿಯನ್ನು ಕಲಿಯುತ್ತಿದ್ದಾರೆ. ಇವರ ಬರವಣಿಗೆ ಹಾಗೂ ನಿರೂಪಣೆಯ ಕಲೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಕಲಾವಿದರ ರಕ್ಷಣಾ ವೇದಿಕೆ, ಬೆಂಗಳೂರು ಹಾಗೂ ಸಮಾಜ ಕಲ್ಯಾಣ ಸಂಸ್ಥೆಯು(ರಿ) ದಿನಾಂಕ 01.01.2020 ರಂದು ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಕಲಾ ಪ್ರತಿಭೋತ್ಸವದಲ್ಲಿ ಸಿರಿಗನ್ನಡ ರಾಷ್ಟ್ರೀಯ ಸೇವಾರತ್ನ ಪ್ರಶಸ್ತಿಯನ್ನು ನೀಡಿ ಪ್ರೋತ್ಸಹಿಸಿದೆ.

# ಎಚ್ಚರ ಗ್ರಾಹಕ ಎಚ್ಚರ...



ಮೋಸ ಹೋಗುವವರು ಇರುವವರೆಗೂ ಮೋಸ ಮಾಡುವವರು ಇದ್ದೇ ಇರುತ್ತಾರೆ ಎಂಬುದು ಹಿಂದಿನಿಂದಲೇ ಚಾಲ್ತಿಯಲ್ಲಿರುವ ಮಾತಾಗಿದೆ.ವ್ಯಾಪಾರದಲ್ಲಂತೂ ಅದು ಅತ್ಯವಶ್ಯಕವಾದ ಅಂಶವಾಗಿ ಮಾರ್ಪಟ್ಟಿದೆ. ವ್ಯಾಪಾರದಲ್ಲಿ ಕರುಣೆಗೆ ಜಾಗವಿಲ್ಲ ಎಂಬುದು ಎಷ್ಟು ಸತ್ಯವೋ ಅದೇ ರೀತಿಯಾಗಿ ಶುದ್ಧಹಸ್ತ ಪ್ರಾಮಾಣಿಕರಿಗೆ ಅವಕಾಶವಿಲ್ಲ ಎಂಬುದು ಅಷ್ಟೇ ಸತ್ಯ.

ಡಿಜಿಟಲ್ ಯುಗವಾಗಿರುವ ಈ ಕಾಲದಲ್ಲಿ ಸಾಂಪ್ರದಾಯಿಕ ವ್ಯಾಪರದಲ್ಲಿ ಕಂಡು ಬರುತ್ತಿದ್ದ ಮೋಸಗಳು ಹೈಟೆಕ್ ಸ್ಪರ್ಶವನ್ನು ಪಡೆದುಕೊಂಡಿವೆ. 'ಆನ್ ಲೈನ್' ದೈತ್ಯ ಸಂಸ್ಥೆಗಳಾದ ಅಮೇಜಾನ್, ಫ್ಲಿಫ್‌ಕಾರ್ಟ್, ವಾಲ್‌ಮಾರ್ಟ್ ಇತ್ಯಾದಿ ಸಂಸ್ಥೆಗಳು ಪ್ರತಿನಿತ್ಯ ಸಾವಿರಾರು ಕೋಟಿ ಮೌಲ್ಯದ ವ್ಯಾಪಾರವನ್ನು ನಡೆಸುತ್ತಿವೆ. ಇದರಂತೆಯೇ ಕೆಲವು ಸಣ್ಣ ಮಟ್ಟದ ಕಂಪನಿಗಳು ಅಂತರ್ಜಾಲದಲ್ಲಿ ತಮ್ಮ ವ್ಯಾಪಾರವನ್ನು ಶುರುಮಾಡಿಕೊಂಡಿದ್ದು ಇಂತಹ ಸಂದರ್ಭದಲ್ಲಿ ವ್ಯಾಪಾರ ಸಮರ ಏರ್ಪಡುವುದು. ಹಾಗಾಗಿ ಈ ಸಮಸ್ಯೆಯನ್ನು ನಿವಾರಿಸಲು ಕಂಡುಕೊಂಡಂತಹ ಮಾರ್ಗವೆಂದರೆ 'ರಿಯಾಯಿತಿ ದರದಲ್ಲಿ ಮಾರಾಟ'.

ಕೆಲವು ಆನ್‌ಲೈನ್ ಮಾರಾಟಗಾರ ಸಂಸ್ಥೆಗಳು ವಸ್ತುಗಳನ್ನು ಮಾರುಕಟ್ಟೆ ಬೆಲೆಗಿಂತ ಹೆಚ್ಚಿರುವಂತೆ ತೋರ್ಪಡಿಸಿ ನಂತರ ತಾವು ನೀಡುವ ರಿಯಾಯಿತಿ ದರವನ್ನು ಬಹಳ ಕಡಿಮೆ ಎಂದು ನಿಗದಿಪಡಿಸಿ ಅವುಗಳ ನಡುವಿನ ಅಂತರವನ್ನು ಗ್ರಾಹಕರು ಬೇಗನೆ ಗಮನಿಸುವಂತೆ ದೊಡ್ಡ ಪದಗಳಲ್ಲಿ ಜಾಹೀರಾತು ನೀಡುತ್ತಾರೆ. ಗ್ರಾಹಕರು ನಿಜವಾಗಿಯೂ ಮೂಲಬೆಲೆ ಅದೇ ದರದಲ್ಲಿ ಮಾರುಕಟ್ಟೆಯಲ್ಲಿದೆಯೇ ಎಂದು ತಿಳಿಯುವ ಗೋಜಿಗೆ ಹೋಗುವುದಿಲ್ಲ. ಇದೆಲ್ಲಾ ತಿಳಿಯುವುದು ಯಾರಾದರೂ ಈ ಕುರಿತು ತಮ್ಮ ಅನುಭವಗಳನ್ನು ತಿಳಿಸಿದಲ್ಲಿ ಅಥವಾ ಸಾಮಾಜಿಕ ಜಾಲತಾಣದಲ್ಲಿ ಇಲ್ಲವೇ ಮಾಧ್ಯಮಗಳಲ್ಲಿ ವರದಿಯಾದ ನಂತರವೇ.

ಇದಲ್ಲದೇ, ಹಲವಾರು ಬಾರಿ ಒಂದೇ ತೆರನಾದ ವಸ್ತುಗಳ ಬೆಲೆಯೂ ಕೂಡ ಬೇರೆ ಬೇರೆ ಕಡೆಗಳಲ್ಲಿ ಹೆಚ್ಚು ಕಡಿಮೆಯಾಗಿ ನಿಗದಿಯಾಗಿರುತ್ತದೆ. ಆದುದರಿಂದ ಆದಷ್ಟು ವಸ್ತುಗಳ ಖರೀದಿಯಲ್ಲಿ ಅವಸರ ಮಾಡದೆ, ಎಲ್ಲವನ್ನೂ ಯೋಚಿಸಿ ಯೋಜಿಸಿ ಖರೀದಿ ಮಾಡುವುದು ಉತ್ತಮ.

– ಕಿರಣ್ ಜೈನ್
III ಬಿ.ಎ

# LEAD PRAYANA : PAVEMENT FOR ENLIGHTENMENT

Journey. We are all a part of journey. And there is no one in this world who wouldn't like to travel. Soon after we hear `Journey' we think of fun, food and mind-blowing view of the new places. But have you thought of a journey full of fun and learning?

Excursion visit? No, Leadership journey. A journey as such isn't found elsewhere. An annual trip conducted by LEAD, Leaders Accelerating Development of Deshpande foundation, Hubbali, paves eternity for youth aged 18 to 26 years old in Karnataka.

This 14 days journey began on 19th January 2020 with a sparkling session in Belgaum. The journey covered places such as Belgaum, Dharwad/Hubballi, Heggoddu, Manipal, Dharmasthala, Moodbidre, Mysore, Bengaluru, Muddenahalli and Heerebendigeri. And the journey ended with an International conference called 'Yuva Summit' on 1st February 2020.




The team witnessed ten eminent personalities. And listening to their words of wisdom and inspiration, followed by an interaction. Travelling for nearly 1800 Kms. Visiting fields builds a sense of practicality and eliminates theoretical learning. The best role models of lead Prayana are none other than Prayanees themselves. 80 students from different background, different course, different age and different college were amalgamated for two weeks, with no one allowed to dismiss until completion. For 14 days everyone had to be an extrovert. Because after-all living with other Prayanees lets you learn life lessons, from their life stories of striving sacrifice for attaining Nirvana. And within 14 days, because of all the fun-filled activities inside or outside the 2 buses,co-prayanees become your best friends.

This is a package of fun, travelling, meeting new people and knowledge. One can learn to come out of their comfort zone and that is when one can learn more. More than meeting co-Prayanees and role models one can meet themselves. One will understand her/his own abilities and inabilities and gradually will understand how one's inabilities can be turned into his abilities. Lead Prayana is a journey of life to understand life in a better way.

- Amrutha
II BA

# WINNER WINNER GOLDEN WINNERS

| NAME | CLASS | EVENT | LEVEL | PLACE |
|---|---|---|---|---|
| Vinay D.R | II B.A | Shuttle Badminton | National | Gold Medal |
| Sudhan | I B.A | Shuttle Badminton | All India inter university | Gold Medal |
| Shiva Prakash | I B.A | Weight Lifting | All India inter university | Gold Medal |
| Purushottama | I B.A | Weight Lifting | All India inter university | Gold Medal |
| Rakshith | I B.com | Weight Lifting | South zone national, udupi | Gold Medal |
| Nikhil N | III B.B.A | volley ball | South zone inter university | Gold Medal |
| Rakesh B.R | III BA | volley ball | South zone inter university | Gold Medal |
| Sindhu J Hedge | I b.com | power lifting | state | Gold Medal |
| Saliyath | II BA | volley ball | South zone vajapayee cup | Gold Medal |
| Deekshanjali S | III BA | volley ball | South zone vajapa-yee cup | Gold Medal |
| Shreya | III B.com | volley ball | South zone vajapa-yee cup Mithin | Gold Medal |
| Mithin | I BA | Kabaddi | South zone inter university | Gold Medal |

## ಶ್!! ಪಾಸ್‌ವರ್ಡ್ ಹೇಳ್ಬೇಡಿ

ಅವ್ನೊಬ್ಬ ಜರ್ನಲಿಸ್ಟ್. ಅವ್ನು ಅದೆಷ್ಟೋ ವರ್ಷಗಳಿಂದ ಸಂಪಾದನೆ ಮಾಡಿದ್ದ ದಾಖಲೆಗಳನ್ನು ತನ್ನ ಐಪ್ಯಾಡ್ ಅಲ್ಲಿ ಇಟ್ರೆ ಸೇಫ್ ಅಂತ ಇಟ್ಟಿದ್ದ. ಅದೊಂದಿನ ಅವನ ಮೊಬೈಲ್ ಯಾರೋ ಅಪರಿಚಿತನಿಂದ




ಹ್ಯಾಕ್ ಆಗಿತ್ತು. ಅದರಿಂದ ಆತ ತನ್ನ ಪ್ರತಿಯೊಂದು ನೆನಪುಗಳು, ರಿಪೋರ್ಟುಗಳನ್ನ ಕಳ್ಕೊಂಡಿದ್ದ. ಜೊತೆಗೆ ಅವನ ಟ್ವಿಟರ್ ಅಕೌಂಟನ್ನೂ... ನಡೆದ ಆಘಾತವನ್ನ ತನ್ನ ಸೈಬರ್ ಕ್ರೈಂ ರಿಪೋರ್ಟರುಗಳಿಗೆ ತಿಳಿಸಿ ಅನೇಕ ಪರಿಣಿತರಿಂದ ಹ್ಯಾಕ್ ಮಾಡಿದವ್ನು ಯಾರು ಅಂತ ತಿಳ್ಕೊಂಡು ಅವ್ನ ಟ್ವಿಟ–ರ್ ಅಕೌಂಟಿಗೆ ಮೆಸೇಜ್ ಮಾಡಿ ಕೇಳ್ತಾನೆ, ನನ್ನಿಂದ ನಿನಗೇನಾದ್ರೂ ಆಗ್ಬೇಕಿತ್ತಾ? ಹ್ಯಾಕ್ ಮಾಡಿದ್ದಾದ್ರೂ ಏಕೆ? ಆ ಹ್ಯಾಕರ್‌ನ ಉತ್ತರ ತುಂಬಾ ಸರಳವಾಗಿತ್ತು... "ನನಗೆ ನಿಮ್ಮ ಟ್ವಿಟರ್ ಅಕೌಂಟಿನ ಹೆಸರು ಬೇಕಾಗಿತ್ತು. ಅದಕ್ಕೆ ಹ್ಯಾಕ್ ಮಾಡ್ದೆ"!!.

1994ರಲ್ಲಿ ರಷ್ಯಾದ ಪ್ರೋಗ್ರಾಮರ್‌ವೊಬ್ಬ ತನ್ನ ಬ್ಯಾಂಕ್ ಅಕೌಂಟುಗಳನ್ನ ಯು.ಎಸ್, ಫಿನ್ಲ್ಯಾಂಡ್, ಜೆರ್ಮನಿ, ಐರ್ಲ್ಯಾಂಡ್‌ಗಳಲ್ಲಿಟ್ಟು ರಷ್ಯಾದ ಅನೇಕ ಬ್ಯಾಂಕುಗಳನ್ನ ಹ್ಯಾಕ್ ಮಾಡಿ ಸುಮಾರು ಹತ್ತು ಬಿಲಿಯನ್‌ಗಳಷ್ಟನ್ನು ತನ್ನ ಅನೇಕ ಖಾತೆಗಳಿಗೆ ಜಮಾ ಮಾಡ್ಕೊಂಡಿದ್ದ. ಇಂತದಕ್ಕೆಲ್ಲಾ ಹೊಣೆ ಯಾರು? ಇದನ್ನೆಲ್ಲಾ ತಡೆಯುವುದೂ ಸುಲಭವಲ್ಲ, ಯಾಕಂದ್ರೆ The world is flat and wide open.

ನಾವಿಂದು ನಮ್ಮ ಇರೋಬರೋ ಮಾಹಿತಿಗಳನ್ನ ಸೋಸಿಯಲ್ ಮೀಡಿಯಾಗಳಲ್ಲಿ ಕೆಲವೊಮ್ಮೆ ನಮ್ಮ ಕಾರ್ಡುಗಳ ನಂಬರನ್ನೂ ಸೇರಿಸಿ... ವಿಚಾರಿಸ್ತೀವಾ ನಾವು ಯಾವತ್ತಾದ್ರೂ? ನಮ್ಮ ಅಕೌಂಟಿನಲ್ಲಿರೋ ಅಷ್ಟೂ ಹಣವೂ ಮತ್ತೊಬ್ಬನಿಂದ ಹ್ಯಾಕ್ ಆದ್ರೆ? ಇಂತಹಾ ಜಗತ್ತಿನಲ್ಲಿ ನಾವಿದ್ದೇವೆ, ಆದ್ರೆ ಸೋಸಿಯಲ್ ಮೀಡಿಯಾಗಳೇ ಇರಬಾರದು ಅನ್ನೋ ಹುಂಬ ನಾನಲ್ಲ ಯಾಕಂದ್ರೆ ಇದೇ ವಿಚಾರವನ್ನ ನಾನೂ ಸೋಸಿಯಲ್ ಮೀಡಿಯಾದಲ್ಲೇ ಹಂಚಿಕೆ ಮಾಡ್ತಾ ಇದ್ದೇನೆ. ಈ ಇನ್ ಫಾರ್ಮೇಶನ್ ಕೂಡ ಫೇಸ್‌ಬುಕ್ ಕಂಪನಿಯಲ್ಲಿ ಸ್ಟೋರ್ ಆಗ್ತಾ ಇರುತ್ತೆ. ಆದರೆ ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕಷ್ಟೆ.

–ವಿಕ್ರಂ ಹೆಗಡೆ, II ಬಿ.ಎ

# ಹೈ Tech ಬಂಧಿಗಳು

ವಿಜ್ಞಾನ-ತಂತ್ರಜ್ಞಾನ ನಮ್ಮ ದಿನನಿತ್ಯದ ಬದುಕನ್ನು ತುಂಬಾ ಸುಲಭಗೊಳಿಸಿದೆ. ಅಂತೆಯೇ ನಮ್ಮ ಜೀವನಕ್ರಮ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೇಲೆ ವಿಪರೀತವೆನ್ನುವಷ್ಟು ಅವಲಂಬಿತವಾಗಿ ಬಿಟ್ಟಿದೆ. ಎಲ್ಲಿಯವರೆಗೆಂದರೆ ಒಂದು ಕ್ಷಣ ನಾವು ಬಳಸುವ ಟೆಕ್ ಉಪಕರಣಗಳು ಅವುಗಳ ಜಾಲ ಸಂಪರ್ಕ ಕಳೆದುಕೊಂಡು ಬಿಟ್ಟರೆ ಪ್ರಪಂಚದಾದ್ಯಂತ ಅಲ್ಲೋಲ ಕಲ್ಲೋಲವೇ ಉಂಟಾಗಿಬಿಡುತ್ತದೆ. ಜಗತ್ತೇ ಸ್ತಬ್ಧವಾದಂತಾಗಿ ಬಿಡುತ್ತದೆ. ಕ್ಷಣಮಾತ್ರದಲ್ಲೇ ಎಷ್ಟೋ ಲಕ್ಷ ಕೋಟಿಗಳ ವ್ಯಾಪಾರ-ವ್ಯವಹಾರ ನಿಂತುಹೋಗುತ್ತದೆ. ಇಷ್ಟೇ ಅಲ್ಲ ಕಣ್ರೀ, ಮಾನಸಿಕವಾಗಿ ನಾವು ತಂತ್ರಜ್ಞಾನವು ಒದಗಿಸುತ್ತಿರುವ ಸೌಲಭ್ಯಗಳಿಗೆ ಅದ್ಯಾವ ಮಟ್ಟಿಗೆ ದಾಸರಾಗಿದ್ದೇವೆ ಎಂದರೆ ತಂತ್ರಜ್ಞಾನದ ಅತಿ ಬಳಕೆಯಿಂದಾಗುವ ಮಾನಸಿಕ ಸಮಸ್ಯೆಗಳನ್ನು ಆಳವಾಗಿ ಆಧ್ಯಯನ ಮಾಡಿ ಅವುಗಳಿಗೆ ಪರಿಹಾರ ಸೂಚಿಸಲೆಂದೇ ವೈದ್ಯ-ವಿಜ್ಞಾನ ಕ್ಷೇತ್ರದಲ್ಲಿ ಹೊಸ-ಹೊಸ ವಿಭಾಗಗಳನ್ನು ತೆರೆಯಲಾಗಿದೆ.ಹೆಚ್ಚೇನು ಹೇಳುವ ಅಗತ್ಯವಿಲ್ಲ ವಿಜ್ಞಾನ ಮತ್ತು ತಂತ್ರಜ್ಞಾನಗಳು ಪ್ರಸ್ತುತ ಜಗತ್ತಿನಲ್ಲಿ ಪ್ರತಿಯೊಬ್ಬರ ಪ್ರತಿದಿನ ಪ್ರತಿ-ಕ್ಷಣದ ಪ್ರತಿ ಆಗುಹೋಗುಗಳ ಅವಿಭಾಜ್ಯ ಅಂಗಗಳಾಗಿರುವುದು ನಿಮಗೂ ತಿಳಿದಿರುವ ವಿಚಾರವೇ ಬಿಡಿ.



ಡಾಟ್ಕಾಂಗಳ ಮಹಾಪೂರ, ದಿನನಿತ್ಯದ ಡೇಟಾ ಹಂಗಾಮ, ತಂತ್ರಜ್ಞಾನದ ಉಪಾಯ, ಸೋಶಿಯಲ್ ಮೀಡಿಯಾ ಅಪಾಯ, ಎಲ್ಲವೂ ನಮ್ಮ ಸುತ್ತಲೀಗ ಸುತ್ತತ್ತಲಿವೆ. ಶಾಲೆಗಳು ಸ್ಮಾರ್ಟ್ ಆಗಿ ಸ್ಮಾರ್ಟ್‌ಕ್ಲಾಸ್‌ಗಳಾಗುತ್ತಿವೆ - ಮಕ್ಕಳಲ್ಲ. ಗ್ರಂಥಾಲಯದ ಜಾಗವನ್ನೀಗ ಗೂಗಲ್ ಅತಿಕ್ರಮಿಸಿದೆ, ನೃತ್ಯ-ನಾಟಕಗಳ ಸ್ಥಾನಕ್ಕೆ ವೆಬ್ ಸೀರೀಸ್‌ಗಳು ಬಂದು ಕೂತಿವೆ. ಗೆಳೆಯರು ಫೇಸ್‌ಬುಕ್‌ನಲ್ಲಿ ಸಿಗುತ್ತಿದ್ದಾರೆ, ಹಸಿವಾದಾಗ ಅಮ್ಮನ ನೆನಪಾಗುತ್ತಿದ್ದ ನಮಗೀಗ ಝೋಮ್ಯಾಟೋ, ಸ್ವಿಗ್ಗಿಗಳಲ್ಲಿ ಆಫರ್‌ಗಳಿಲ್ವ ಎಂದು ಹುಡುಕುವ ಖಯಾಲಿ ಶುರುವಾಗಿದೆ. ಆಟದ ಮೈದಾನಗಳಿಗಿಂತ ಕಂಪ್ಯೂಟರ್ ಗೇಮ್‌ಗಳೇ ರೋಮಾಂಚನವುಂಟು ಮಾಡುತ್ತಿವೆ. ಮನೆಯಲ್ಲಿ ನಾವೇ ಕೆಲವೊಂದು ವಸ್ತುಗಳನ್ನು ಎಲ್ಲೋ ಇಟ್ಟು ಮರೆತು ಬೇಕಾದಾಗ ಹುಡುಕಿ ಸಿಗದಿದ್ದಾಗಲೋ, ನಾಳಿನ ಊಟಕ್ಕೇನು ಎಂದು ಕೇಳಲೋ ಮಮತೆಯ ಅಮ್ಮನ ಬದಲು ನಮಗೀಗ ಅಮೆಜಾನ್‌ನ 'ಅಲೆಕ್ಸಾ' ಸಿಕ್ಕಿದ್ದಾಳೆ. ಎಲ್ಲಕ್ಕೂ ತಂತ್ರಜ್ಞಾನವನ್ನು ಅತೀ ಅವಲಂಬಿಸಿ ಅದರ ಕಬಂಧ ಬಾಹುಗಳಲ್ಲಿ ಸಿಲುಕಿದ ನಾವೀಗ ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಹೈ'ಟೆಕ್' ಬಂಧಿಗಳಾಗಿದ್ದೇವೆ.

ಇನ್ನು ಸೋಶಿಯಲ್ ಮೀಡಿಯಾ ವಿಷಯಕ್ಕೆ ಬರೋಣ. ಸೋಶಿಯಲ್ ಮೀಡಿಯಾಗಳಲ್ಲಿ ಆರು ವರ್ಷದ ಬಾಲಕನಿಂದ ಹಿಡಿದು ಅರೆ ಮುದುಕನ ತನಕ ಸಾಮಾಜಿಕ ಜಾಲತಾಣದ ಕಗ್ಗಾಡಿನಲ್ಲಿ ದೊಡ್ಡ ಬದುಕನ್ನು ಬದುಕುತ್ತಿರುತ್ತಾರೆ. ಇನ್ನೂ ಫೇಸ್ಬುಕ್ನಲ್ಲಿ, ವಾಟ್ಸಪ್ ಸ್ಟೇಟಸ್‌ನಲ್ಲಿ ಮನಸ್ಸಿಗೆ ಬಂದಿದ್ದನ್ನು ಗೀಚುವ ಖಯಾಲಿ ಹೆಚ್ಚುತ್ತಿದೆ. ನಮ್ಮ ಆಸೆ, ದುಃಖ, ಬಯಕೆ, ಒಳ ಮನಸ್ಸಿನ ತಾಕಲಾಟಗಳನ್ನು ಫೇಸ್‌ಬುಕ್ ಗೋಡೆಯ ಮೇಲೆ ಗೀಚಿ ತನ್ಮೂಲಕ ನಮ್ಮ ಮನಸ್ಥಿತಿ ಇತರರಿಗೆ ತಿಳಿಯುವಂತಾಗಿ ಅದರಿಂದ



ಹಲವು ಸಮಸ್ಯೆಗಳನ್ನು ನಾವಾಗಿಯೇ ತಂದುಕೊಳ್ಳುತ್ತಿದ್ದೇವೆ. ಇನ್ನು ನಮ್ಮ ಮನಸ್ಸನ್ನು ಅರಿಯಲು ಬೇರೆಯವರಿಂದ ಬಿಡಿ ನಮ್ಮಿಂದಲೂ ಸಾಧ್ಯವಿಲ್ಲವಾದರೂ 'ಮುಖಪುಸ್ತಕ' ತನ್ನದೇ ರೀತಿಯಲ್ಲಿ ಜಗತ್ತಿನ ಮುಂದೆ ನಮ್ಮನ್ನು ಬೆತ್ತಲೆಗೊಳಿಸಿಬಿಡುತ್ತದೆ. ನಮ್ಮ ಮುಖವಾಡವನ್ನು ಹೊರಹಾಕುತ್ತದೆ. ನಿಮಗೆ ಅದು ಇಷ್ಟ ಇದು ಇಷ್ಟ ಎಂದು ಇಲ್ಲಸಲ್ಲದ ವಸ್ತುಗಳನ್ನೆಲ್ಲಾ ತೋರಿಸುತ್ತಾ ನಮ್ಮನ್ನು ಮೂರ್ಖರನ್ನಾಗಿ ಮಾಡುತ್ತದೆ.

ಸೋಶಿಯಾಲ್ ಮೀಡಿಯಾದ ವಿಶೇಷತೆ ಮತ್ತೊಂದಿದೆ, ಇಲ್ಲಿ ನಾವು ನಮಗೆ ಗೊತ್ತಿಲ್ಲದ ವಿಷಯವೇ ಇಲ್ಲವೆಂಬಂತೆ ವರ್ತಿಸುತ್ತೇವೆ. ನಮ್ಮನ್ನು ನಾನು ಸರ್ವಜ್ಞರೆಂದು ತೋ-ರಿಸಿಕೊಳ್ಳಲು ಇನ್ನಿಲ್ಲದಂತೆ ಹೆಣಗುತ್ತೇವೆ. ಅಡಿಗೆ ಮನೆಯಿಂದ ಅಣು ಬಾಂಬ್‌ನಂತಹ ವಿಷಯಗಳ ಚರ್ಚೆಗಳವರೆಗೂ ನಮ್ಮ "ತಜ್ಞ ಅಭಿಪ್ರಾಯ"ಗಳನ್ನು ಲಂಗುಲಾಗಮಿಲ್ಲದೆ ಕಾಮೆಂಟಿಸುತ್ತೇವೆ. ನಮಗೆ ಗೊತ್ತಿಲ್ಲವಾದರೂ ಗೊತ್ತಿದೆಯೆಂದು ನಟನೆ ಮಾಡುವ ಜಾಗ ಇದೊಂದೇ ಇರಬೇಕು. ನಾಲ್ಕು ಅಂಗಳದ ಗೋಡೆ ದಾಟಿ ಹೋಗಲು ನಾವೀಗ ಬಯಸುತ್ತಿಲ್ಲ, ಯಾರೂ ನಮ್ಮನ್ನು ಮಾತನಾಡಿಸುವುದೂ ನಮಗೆ ಬೇಡವಾಗಿದೆ. ಮೊಬೈಲೇ ಜಗತ್ತು ಎಂಬಂತಾಗಿದೆ ಅಲ್ಲಿಗೆ ಬಂದಿದೆ ನಮ್ಮ ಪರಿಸ್ಥಿತಿ. ಯಾರಿಗೆ ಹೇಳೋದು ನಮ್ಮ ಪ್ರಾಬ್ಲಮ್. ಟೆಕ್ನಾಲಜಿ ನಮ್ಮನ್ನ ಆಳವಾಗಿ ರಾಕ್ಷಸನಂತೆ ಆವರಿಸಿಕೊಂಡುಬಿಟ್ಟಿದೆ. ಅದು ನಮ್ಮನ್ನು ಗುಲಾಮರನ್ನಾಗಿಸಿ ದಿನದ 24 ಗಂಟೆಯೂ ಅದಕ್ಕೆ ಅಡಿಕ್ಟ್ ಆಗುವಂತೆ ಮಾಡಿಬಿಟ್ಟಿದೆ.

ಹಾಗಂತ ಟೆಕ್ನಾಲಜಿಯೆಂದರೇ ಕೆಟ್ಟದ್ದು ಎಂದು ನಾನು ಹೇಳುತ್ತಿಲ್ಲ. ತಂತ್ರಜ್ಞಾನದ ನೆರವಿನಿಂದ ಇಂದು ಬದುಕು ಸುಲಭವಾಗಿದೆ. ಮಾಹಿತಿ ಕೈ ಬೆರಳಿನ ತುದಿಯಲ್ಲೇ ಸಿಗುತ್ತಿದೆ. ವಿಶ್ವದ ಯಾವುದೇ ಭಾಗದಲ್ಲಿರುವ ಸಮಾನ ಮನಸ್ಕರೊಟ್ಟಿಗೆ ಸ್ನೇಹ ಬೆಳೆಸಬಹುದಾಗಿದೆ. ಸಾಂಪ್ರದಾಯಿಕ ಮಾದರಿಗಿಂತಲೂ ತಂತ್ರಜ್ಞಾನದ ಸಹಾಯದಿಂದ ವಿದ್ಯಾರ್ಥಿಗಳಿಗೆ ಹೆಚ್ಚು ವಿಷಯಗಳು ಮನಮುಟ್ಟುವಂತೆ ಪಾಠ ಮಾಡಬುಹುದಾಗಿದೆ. ಎಲ್ಲೋ ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಕ್ರಿಕೆಟ್ ಪಂದ್ಯವನ್ನು ಮನೆಯಲ್ಲೇ ಕುಳಿತು ನೇರಪ್ರಸಾರ ವೀಕ್ಷಿಸಬಹುದಾಗಿದೆ. ಇನ್ನೊಂದೆಡೆ ಅತಿಯಾದ ಮೊಬೈಲ್ ಬಳಕೆಯಿಂದ ಸ್ಕ್ರೀನ್ ಅಡಿಕ್ಷನ್‌ಗೆ ಒಳಗಾಗುತ್ತೇವೆ. ಏಕಾಗ್ರತೆಗೆ ಮಾನಸಿಕ ನೆಮ್ಮದಿಗೆ ಭಂಗ ಬರುತ್ತದೆ. ಹಲವು ಮಾನಸಿಕ ಖಾಯಿಲೆಗಳು ಅಡರಿಕೊಳ್ಳುತ್ತವೆ. ಆದ್ದರಿಂದ ತಂತ್ರಜ್ಞಾನದ ಬಳಕೆಯಿರಲಿ ಆದರೆ ಅದು ಯಾವುದಕ್ಕೇ ಬೇಕೋ ಅದಕ್ಕಿರಲಿ.

ಜಾಲತಾಣಗಳಲ್ಲಿ ಮುಳುಗಿ, ಆದರೆ ಮುಳುಗಿ ಸಾಯುವ ಹಾಗೆ ಅಲ್ಲ. ಅಲ್ಲವೇ !

- ಶಾಂತ್‌ಕುಮಾರ್ ಡಿವಿಜಿ

III ಬಿ.ಎ

# ಅವಕಾಶಗಳು ಆಕಾಶದಷ್ಟು ವಿಶಾಲವಾಗಿದೆ ಬಳಸಿಕೊಳ್ಳಿ

'Student life is golden life' ನಿಜವಾಗಿಯೂ ಸರಿ ,ನಮ್ಮ ಕಾಲೇಜಿನಲ್ಲಿ ದೇಶ ಸೇವೆಗೆ ಎನ್‌ಸಿಸಿ, ಎನ್‌ಎಸ್‌ಎಸ್, ರೋವರ್ಸ್ ರೇಂಜರ್ಸ್ ಕಲಾ ಸಾಧನೆಗೆ




ಕಲಾಕೇಂದ್ರ ಕ್ರೀಡಾ ಸಾಧನೆಗೆ ಸುಸಜ್ಜಿತ ಕ್ರೀಡಾಂಗಣ. ವ್ಯಕ್ತಿತ್ವ ವಿಕಾಸಕ್ಕೆ ಕಾಲೇಜಿನಲ್ಲಿ ಅವಕಾಶಗಳೇನಿದೆ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ ನೋಡಿ.

1.ಜ್ಞಾನ ವೃದ್ಧಿಗೆ ಫೋರ:ಕಾಲೇಜಿನಲ್ಲಿ ನಡೆಯುವ ಎಲ್ಲಾ ವಿಚಾರಗಳು ಒಂದು ಹಂತದವರೆಗೂ ಔಪಚಾರಿಕವಾಗಿದ್ದರೆ ಈ ಫೋರ ತರಗತಿಗಳು ಪೂರ್ಣವಾಗಿ ಅನೌಪಚಾರಿಕವಾಗಿ ನಡೆಯುತ್ತವೆ. ವಿದ್ಯಾರ್ಥಿ ಪ್ರತಿನಿಧಿಗಳಾಗಿ ಆಯ್ಕೆಗೊಂಡ ತರಗತಿ ಪ್ರತಿನಿಧಿಗಳೇ ಇಲ್ಲಿ ಉಪನ್ಯಾಸಕರು. ಕ್ರಾಫ್ಟ್, ಫೋಟೋಗ್ರಫಿ, ಕಮ್ಯುನಿಕೆಟಿವ್‌ಇಂಗ್ಲೀಷ್, ಕಾರ್ಟೂನ್ ಹೀಗೆ ಒಟ್ಟು ಹನ್ನೊಂದು ಬಗೆಯ ವಿಷಯಗಳ ಕುರಿತು ಇಲ್ಲಿ ವಿಚಾರ ವಿನಿಮಯವಾಗುತ್ತವೆ. ವಾರದಲ್ಲಿ ಒಂದು ದಿನ ತರಗತಿಗಳು ನಡೆಯುತ್ತಿದ್ದು ಪ್ರಥಮ ಪದವಿ ವಿದ್ಯಾರ್ಥಿಗಳ ಕೇಂದ್ರ ಬಿಂದುಗಳು. ಇವು ವಿದ್ಯಾರ್ಥಿಗಳಲ್ಲಿ ತಮ್ಮ ಆಸಕ್ತಿಯನ್ನು ಹೆಚ್ಚಿಸಿಕೊಳ್ಳಲು ಜ್ಞಾನ ವೃದ್ಧಿಸಿಕೊಳ್ಳಲು, ಕ್ರಿಯಾಶೀಲರಾಗಲು ಹಾಗೂ ಕಾಲೇಜಿನ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಲು ಪ್ರೇರಣೆ.

2.ಗೋಲ್ಡನ್ ಲೈಫನಲ್ಲೊಂದು ಗೋಲ್ಡೆನ್ ಕಾರ್ಡ್: ನಮ್ಮ ಕಾಲೇಜಿನಲ್ಲೂ ಗ್ರಂಥಾಲಯ ಇದೆ. ವಿಶೇಷವೇನೆಂದರೆ ತಮ್ಮ ಪಠ್ಯದ ಅವಧಿಯ ನಡುವೆಯೂ ಹೆಚ್ಚು ಸಮಯವನ್ನು ಗ್ರಂಥಾಲಯದಲ್ಲಿ ಕಳೆದ ವಿದ್ಯಾರ್ಥಿಗಳಿಗೆ ಗೋಲ್ಡನ್ ಕಾರ್ಡ್ ನೀಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಇನ್ನಷ್ಟು ಗ್ರಂಥಾಲಯ ಬಳಕೆ ಮಾಡುವ ನಿಟ್ಟಿನಲ್ಲಿ ವಿಶೇಷ ಕೊಠಡಿಯನ್ನು ಸೃಷ್ಟಿಸಲಾಗಿದೆ. ಕೊಠಡಿಯೊಳಗೆ ಗೋಲ್ಡೆನ್ ಕಾರ್ಡ್ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ. ಇನ್ನು ಬಿಡುವಿನ ಸಮಯದಲ್ಲಿ ಗ್ರಂಥಾಲಯ ಬಳಸಿಕೊಳ್ಳಿ.

3.ಟ್ಯಾಲೆಂಟ್‌ಗಳಿಗೆ ಟ್ಯಾಲೆಂಟ್ಸ್ ಕಾರ್ನರ್: ಪ್ರತಿಭೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಒಪೆನ್ ಕ್ಲಾಸ್ ರೂಮ್ ಪಕ್ಕದಲ್ಲಿ ಹೊಸ ವೇದಿಕೆಯನ್ನು ಸೃಷ್ಟಿಸಲಾಗಿದೆ. ಪ್ರತಿಭೆಗಳನ್ನು ಹೊಂದಿರುವ ವಿದ್ಯಾರ್ಥಿಗಳು ಇಲ್ಲಿ ಕಾರ್ಯಕ್ರಮ ನೀಡಬಹುದು. ಯಾವುದೆ ರೀತಿಯ ಕಲೆಗೂ ಇದು ಮುಕ್ತವಾಗಿದೆ.ವಾರದಲ್ಲಿ ಮೂರು ದಿನಗಳು ಮಾತ್ರ ಸಂಜೆ ನಾಲ್ಕ ರಿಂದ ಐದರವರೆಗೆ ಕಾರ್ಯಕ್ರಮ ನಡೆಯಲಿದೆ. ಪ್ರತಿಭೆಯ ಅನಾವರಣ ಮಾಡಲು ಸೂಕ್ತ ವೇದಿಕೆ.

4.ವಿದ್ಯಾರ್ಥಿ ಅಧ್ಯಾಪಕರು:ಕಾಲೇಜಿನಲ್ಲಿ ಸೆಮಿನಾರ್‌ಗಳು ಸರ್ವೇ ಸಾಮಾನ್ಯವಾದರೆ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಅಧ್ಯಾಪಕರಾಗುವ ಅವಕಾಶ ಕಲ್ಪಿಸಿಕೊಡಲಾಗಿದೆ. ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ವಿಷಯದ ಆಧಾರದಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಪ್ರಾಧ್ಯಾಪಿಕ ಶೈಲಿ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆ ನಡೆಯುತ್ತವೆ. ಇನ್ನು ಆಯ್ಕೆಗೊಂಡ ವಿದ್ಯಾರ್ಥಿ ಅಧ್ಯಾಪಕರು ವರ್ಷದಲ್ಲಿ ಆರರಿಂದ ಎಂಟು ಗಂಟೆ ತರಗತಿಯನ್ನು ತೆಗೆದುಕೊಳ್ಳುವ ಅವಕಾಶ ದೊರೆಯುತ್ತದೆ.ಸಂಭಾವನೆಯೂ ನೀಡಲಾಗುತ್ತಿದೆ.ಈ ಯೋಜನೆಯು ಭವಿಷ್ಯದಲ್ಲಿ ಅಧ್ಯಾಪಕರಾಗಬೇಕೆಂಬ ಆಸೆ ಹೊಂದಿರುವ ವಿದ್ಯಾರ್ಥಿಗಳಿಗೆ ಕೈಪಿಡಿಯಾಗಿ, ಬೋಧಿಸುವ ಕಲೆ ಇನ್ನಷ್ಟು ಹೆಚ್ಚಿಸಿಕೊಳ್ಳುವ ದೃಷ್ಟಿಯಲ್ಲಿ ಸಹಾಯಕವಾಗುತ್ತದೆ. ಅವಕಾಶಗಳು ನಮ್ಮ ಆಯ್ಕೆಗಳು ನಮ್ಮ ಕೈಯಲ್ಲಿದೆ.ಸಾಧ್ಯವಾದಷ್ಟು ಬಾಚಿಕೊಳ್ಳೋಣ.!

– ಸುಹಾಸ್ ಎಂ ರಾವ್
III ಬಿ.ಎ.

# ಮಳೆಯ ಮಧ್ಯೆ ಮುದ್ದಾದ ಪಯಣ

ಬಸ್ ಪ್ರಯಾಣ ಯಾರಿಗೆ ಗೊತ್ತಿಲ್ಲ ಹೇಳಿ? ಬಸ್ಸಿನಲ್ಲಿ ಪ್ರಯಾಣಿಸದೇ ಇರುವವರು ಬಹಳ ವಿರಳ. ದೂರದೂರಿನ ಪ್ರವಾಸಗಳಿಂದ ಹಿಡಿದು ದಿನನಿತ್ಯ ಶಾಲಾ–ಕಾಲೇಜು ಕಚೇರಿಗಳು ಹೋಗುವವರಿಗೆ ಅತ್ಯಂತ ಸಹಾಯಕ. ಬಸ್ ಪ್ರಯಾಣದ ಹೆಸರು ಕೇಳಿದರೇನೇ ನೆನಪುಗಳ ಮೆರವಣಿಗೆಗೆ ಸಾಲುಸಾಲಾಗಿ ಮನದ ಪಟಲದ ಮೇಲೆ ಚಲಿಸುತ್ತದೆ.

ಕಾಲೇಜಿಗೆ ಹೋಗುವಾಗ ಪ್ರತಿದಿನವೂ ಬಸ್ಸಿನಲ್ಲೇ ಹೋಗುತ್ತಿದ್ದೆಯಾದ್ದ–ರಿಂದ ಅದರ ಅನುಭವಗಳೂ, ನೆನಪುಗಳೂ ಬಹಳ. ಮಲೆನಾಡಿನ ತಪ್ಪಲಿನಲ್ಲಿರುವ ಪುಟ್ಟ ಹಳ್ಳಿ ನಮ್ಮದಾದ್ದರಿಂದ ಅನುದಿನವೂ ಕಣ್ಣಿಗೆ ಹಬ್ಬ ಇದ್ದದ್ದೇ.

ಮಲೆನಾಡಿನ ಆ ಸೋನೆ ಮಳೆಯಲ್ಲಿ ಬಸ್ಸಿನ ಪ್ರಯಾಣವೇ ಚಂದ, ಅದರಲ್ಲೂ ಜಿಟಿಜಿಟಿ ಮಳೆ ಸು–ರಿಯುತ್ತಿದ್ದರೆ ಕಿಟಕಿ ಪಕ್ಕದಲ್ಲಿ ಕುಳಿತು ಹೊರಗಿನ ವೈಭವವನ್ನು ನೋಡುವುದು ಮತ್ತೂ ಚಂದ. ಬಸ್ಸಿನ ಒಳಗಿನಿಂದಲೇ ಹೊರನೋಡುತ್ತಾ, ನೋಡಿದುದೆಲ್ಲದಕೆ ಮೂಕಸಾಕ್ಷಿಯಾಗುತ್ತಾ, ಪ್ರತಿಯೊಂದನ್ನು ಅನುಭವಿಸುತ್ತಾ ನಮ್ಮಲ್ಲಿ ಗುನುಗುನಿಸುತ್ತಾ ಹೋಗುವುದಿಲ್ಲ ಅದಕ್ಕಿಂತ ಮಿಗಿಲಾಗಿ ಯಾವುದೂ ಇಲ್ಲ.



ಮಂಜುಮುಸುಕಿದ, ಚೂರೂ ಕಾಣದ ದಾರಿಯ, ಮಲೆನಾಡಿನ ಪುಟ್ಟ ಹಳ್ಳಿಯಂತಹ ಊರಿನಲ್ಲಿ, ರಸ್ತೆಯೇ ಅಲ್ಲದಂತಹ ರಸ್ತೆಯಲ್ಲಿ, ಬಸವನ ಹುಳುವಿನಂತೆ ಮೆಲ್ಲಗೆ ಆ ತಿರುವು–ಮುರುವಿನ ಹಾದಿಯಲ್ಲಿ ಸಾಗುವ ಅನುಭವ ವರ್ಣಿಸಲಸಾಧ್ಯ.

ಮಳೆ ಬರುವಾಗಿನ ಆ ವಾತಾವರಣವೇ ಸ್ವರ್ಗ ಸದೃಶವಾಗಿ, ಬಸ್ಸಿನ ಮೂಲಕ ಪ್ರಯಾಣಿಸುವವರಿಗೆ ಯಾವುದೋ ಮಾಯಾಲೋಕವನ್ನು ದಾಟಿ ಹೋಗುತ್ತಿದ್ದೇವೇನೋ ಎಂದೆನಿಸಿದರೆ ಅತಿಶಯೋಕ್ತಿಯಲ್ಲ. ಹೀಗೆ ಪ್ರತಿನಿತ್ಯ ರಮ್ಯ ರಮಣೀಯ ದೃಶ್ಯಗಳನ್ನು ಮೊಗೆಮೊಗೆದು ಕೊಡುತ್ತಿದ್ದ ಮಲೆನಾಡಿನ ಪ್ರಯಾಣದ ನೆನಪುಗಳು ಅಪಾರ. ಈಗ ಕಾರ್ಯನಿಮಿತ್ತ ಇನ್ನೊಂದೇ ಊರಿನಲ್ಲಿ ವಾಸಿಸುತ್ತಿದ್ದೇನೆ ಆದ–ರಿಂದ ಏನನ್ನೋ ಕಳೆದುಕೊಂಡಿದ್ದೇನೆಂಬ ಭಾವ.. ಆದರೂ ಆಗೊಮ್ಮೆ ಈಗೊಮ್ಮೆ ಎಲ್ಲಿಯಾದರೂ ಪ್ರಯಾಣಿಸುವಾಗ ಈ ನೆನಪುಗಳೆಲ್ಲ ಬಂದು ಹಳೆಯ ದಿನಗಳು ಮರುಕಳಿಸಿದಂತೆ ಭಾಸವಾಗುತ್ತದೆ. ಆ ಅನುಭವಗಳ ನೆನಪೇ ಚಂದ.

– ಗೌತಮಿ ಕಾಕತ್ಕರ್
III ಬಿ.ಎ.

# It's the winter

A scene where a mother instructs her little son to cover himself up with those sweaters and mufflers along with gloves. And where people await near small tea shops for hot tea to be served. It's the winters! The end of December and arriving January, there comes the winter with a bang! Mists, cool breezes all around us find demand for woolens rising. If true or not, winter has a negative aspect too. It is believed that winter is a depression bringing season.

Warmth is the demand and woolens will be in command. It's a thrilling experience in the winters wearing socks, sweaters, mufflers, gloves and all those clothes to protect themselves from coldness. The cool breeze gives us a sense of delight than the heavy sunshine during summers. Tiring summers are upcoming and cool winters are gone. Another humorous part of the winters is that we find people around us sneezing! Cold infected people will all be around us. Demand for medicines will be on the roof.



During winters it is believed that days are shorter and nights are longer. December 22nd of the winter is a day which has the longest span of nighttime with short daytime. There is a special bird, which unlike other birds, does not migrate in the winters. Red cardinal is the bird found mostly in South of Canada and Southern Mexico. The specialty of this bird is that it sings melodiously during winters. Originating from North America, this bird finds itself as a symbol of fortune in the minds of native people.

Now when there is an end to the winter season…I am waiting for the upcoming season which gives me the same pleasure……

- Anupama Shastry

III BA

# ಸಂಸ್ಕೃತ–ಸಂಸ್ಕೃತಿ ಶಿಬಿರ

ಪ್ರತಿಯೊಬ್ಬರ ಜೀವನದಲ್ಲೂ ಒಂದಷ್ಟು ಮರೆಯಲಾಗದ ನೆನಪುಗಳು ಯಾವತ್ತು ಇರುತ್ತದೆ. ಆ ನೆನಪುಗಳು ಸ್ಮೃತಿಪಟಲದಲ್ಲಿ ಅಚ್ಚೊತ್ತಿ ಆಗಾಗ ನೆನಪಿಸುತ್ತಾ ಇರುತ್ತವೆ. ಹೀಗೆ ನೆನಪಿಸುವ ಅನೇಕ ವಿಷಯಗಳಲ್ಲಿ ಸಂಸ್ಕೃತ ವಿಭಾಗವು ಆಯೋಜಿಸಿದ ಶಿಬಿರವು ಒಂದು. ನಮ್ಮ ಕಾಲೇಜಿನ ಸಂಸ್ಕೃತ ವಿಭಾಗದ ಸುವರ್ಣ ಮಹೋತ್ಸವದ ಅಂಗವಾಗಿ ಮೂರು ದಿವಸಗಳ ಅನಿವಾಸ ಶಿಬಿರವನ್ನು ಆಯೋಜಿಸಿದ್ದರು.

ವಿಭಾಗದ ವತಿಯಿಂದ ಮೂರು ದಿನಗಳ ಸಂಸ್ಕೃತ–ಸಂಸ್ಕೃತಿ ಶಿಬಿರವು ಅರಿಪ್ಪಾಡಿ ಮಠದಲ್ಲಿ 20–12–2019 ರಿಂದ 22–12–2019ರ ವರೆಗೆ ನಡೆಯಿತು. ಈ ಶಿಬಿರದಲ್ಲಿ ಕಾಲೇಜಿನ 68 ವಿದ್ಯಾರ್ಥಿಗಳು ಹಾಗೂ ಮೂವರು ಪ್ರಧ್ಯಾಪಕರು ಭಾಗವಹಿಸಿದ್ದರು. ಶಿಬಿರದ ಮೊದಲನೇ ದಿನ ವಿಭಾಗದ ನಿವೃತ್ತ ಉಪನ್ಯಾಸಕರಾದ ವಿದ್ವಾನ್ ವಿಷ್ಣುಮೂರ್ತಿ ಭಟ್ಟ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಭಗವದ್ಗೀತಾ ಜಯಂತಿಯ ನಿಮಿತ್ತ ನಡೆಸಿದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣೆಯು ನಡೆಯಿತು. ನಂತರ ಶಿಬಿರಾರ್ಥಿಗಳನ್ನು ಪತಂಜಲಿ ಹಾಗೂ ಪಾಣಿನಿ ಎಂದು 2 ತಂಡಗಳಾನ್ನಾಗಿ ವಿಂಗಡಿಸಿದರು.




ಶಿಬಿರದಲ್ಲಿ ಸಂಸ್ಕೃತ ಸಂಭಾಷಣೆಯನ್ನು ಹೇಳಿಕೊಡಲು ಸಂಸ್ಕೃತ ಭಾರತಿಯಿಂದ ಇಂದಿರಾ ಹಾಗೂ ಅಭಿಜ್ಞಾ ಇವರು ಆಗಮಿಸಿ, ದಿನದಲ್ಲಿ 4 ಗಂಟೆ ಸಂಸ್ಕೃತ ಸಂಭಾಷಣೆಯನ್ನು ಹೇಳಿಕೊಡುತ್ತಿದ್ದರು. ವಿಶೇಷವಾಗಿ ಸಂಸ್ಕೃತ ಸಂಭಾಷಣಾ ಅವಧಿಯಲ್ಲಿ ವಿದ್ಯಾರ್ಥಿಗಳನ್ನು ಹೊರತು ಪಡಿಸಿ ಇತರರಿಗೂ ಅವಕಾಶವನ್ನು ಕಲ್ಪಿಸಲಾಗಿತ್ತು. ಇದರ ಜೊತೆಗೆ ವಿಧ್ಯಾರ್ಥಿಗಳಿಗೆ ಯೋಗಾಸನ, ಪ್ರಾಣಾಯಾಮ, ಭಗವದ್ಗೀತಾ ಪಠಣ, ಸಂಸ್ಕೃತ ಕ್ರೀಡೆ, ಸಂಸ್ಕೃತ ಗೀತೆ, ಸಾಂಸ್ಕೃತಿಕ ಕಾರ್ಯಕ್ರಮ, ಶೈಕ್ಷಣಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು.

ಶಿಬಿರದ ಮೊದಲನೇ ದಿನ ವಿದ್ಯಾರ್ಥಿಗಳು ಸುಧನ್ವಾರ್ಜುನ ಎಂಬ ಯಕ್ಷಗಾನ ತಾಳಮದ್ದಳೆಯನ್ನು ನಡೆಸಿಕೊಟ್ಟರು. ಶಿಬಿರದಲ್ಲಿ ಸಂಸ್ಕೃತಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ ನಡೆಯಿತು. ಶಿಬಿರದ ಕೊನೆಯ ದಿನ ಸಂಸ್ಕೃತ ವಿಭಾಗದ ಪ್ರಯೋಗಿಕ ಪತ್ರಿಕೆಯಾದ ಸುಬೋಧಿನಿಯನ್ನು ಬಿಡುಗಡೆಗೊಳಿಸಲಾಯಿತು.

ಒಟ್ಟಾರೆಯಾಗಿ ಈ ಶಿಬಿರವು ವಿದ್ಯಾರ್ಥಿಗಳ ಪಾಲಿಕೆ ಸಿಕ್ಕ ಸುವರ್ಣ ಅವಕಾಶ. ಮೂರು ದಿನಗಳು ಸಂಸ್ಕೃತದಲ್ಲಿ ಸಂವಹನ, ಕಥೆಗಳು, ಗೀತೆಗಳು, ಕ್ರೀಡೆಗಳು ಹೀಗೆ ಸಂಪೂರ್ಣವಾಗಿ ಸಂಸ್ಕೃತದಿಂದಲೇ ಕೂಡಿತ್ತು. ಎಲ್ಲಾ ಶಿಬಿರಾರ್ಥಿಗಳು ಒಂದೇ ಮನೆಯ ಮಕ್ಕಳಂತೆ ಕಳೆದ ಆ ಮೂರು ದಿನಗಳು ಶಾಶ್ವತವಾಗಿ ನೆನಪಿನಂಗಳದಲ್ಲಿ ಇರುತ್ತದೆ.

III ಕಾವ್ಯಶ್ರೀ

ಬಿ.ಎ

# ಆಯುಷ್ಯವಿಲ್ಲದ ಜಗದೊಳಗೆ

ಆಯುಷ್ ತನ್ನ ಫೋನ್‌ಗೆ ಎಂದಿನಂತೆ ಜೋತುಬಿದ್ದಿದ್ದ. ಆತನ ಫೋನ್‌ನ ಮೇಲೆ ಇರುವ ಮೋಹ ಯಾವ ಪ್ರೇಮಿಗೂ ತನ್ನ ಪ್ರೇಯಸಿಯ ಮೇಲೆ ಇರಲು ಸಾಧ್ಯವಿಲ್ಲಾಂತ! ದಿನವಿಡೀ ಆ ಜಂಗಮವಾಣಿಯ ವಶದಲ್ಲಿ ಇರುತ್ತಿದ್ದ. ಒಂದೆಡೆ ಫೆಸಬೂಕ್,ಇನ್ಸ್ಟ,ಯೂಟ್ಯೂಬ್‌ನ ಜಾಲತಾಣಗಳಲ್ಲಿ ತೇಲಾಡುತ್ತಿದ್ದ ಆಯುಷ್. ಅವತ್ತು ರಾತ್ರಿ 11.30 ಆಗಿತ್ತು. ಆಯುಷ್‌ನ ಅಮ್ಮ ಬಂದು "ಅಯ್ಯೋ ಮಗನೇ, ಫೋನ್‌ನ ಒಮ್ಮೆ ಬಿಡ್ತೀಯ! ಲೇಟ್ ಆಯಿತು. ಮಳೆ ಬೇರೆ ಒಂದೇ ಸಮನೆ ಬರ್ತಾ ಇದೆ. ನಾಳೆ ಕರೆಂಟ್ ಇರಲ್ಲ ಕಣೋ. ಮಲ್ಕೊಳೋ!" ಎಂದು ಬೈದಳು. ಇವನೋ ಮಾತೇ ಕೇಳಲಿಲ್ಲ. ಬೆಳಗ್ಗೆ 3 ಗಂಟೆಯವರೆಗೆ ಫೋನ್ ಹಿಡಿದು ಕೂತಿದ್ದ ಆಯುಷ್,ನಿದ್ದೆ ಬಂದಿದ್ದು ಗೊತ್ತೇ ಆಗದೆ ಹಾಗೆ ಮಲಗಿಬಿಟ್ಟ.

ಸೂರ್ಯ ನೆತ್ತಿಗೆ ಏರಿದಾಗ ಆಯುಷ್ ಎದ್ದು ಕಣ್ಣುಬಿಟ್ಟ ಕೂಡಲೇ ತನ್ನ ಫೋನ್‌ನ ಆನ್ ಮಾಡಿದ ಸತ್ತ ಹೆಣವಾಗಿತ್ತು. ಆಯುಷ್ ಚಡಪಡಿಸಿದ. ದಿಢೀರನೆ ಎಲ್ಲರ ಮೇಲೂ ರೇಗಾಡಲು ಪ್ರಾರಂಭಿಸಿದ. ಎಲ್ಲವೂ ವಿಚಿತ್ರವೆನಿಸುವಂತೆ ಭಾಸವಾಯಿತು. ಆಯುಷ್ ಇದ್ದಕ್ಕಿದ್ದಂತೆ ಜೋರಾಗಿ "ನಂಗೆ ಫೋನ್ ಬೇಕು ಅಷ್ಟೇ" ಅಂತ ಮಗುವಿನಂತೆ




ಅಳತೊಡಗಿದ.ಏನೂ ತೋಚದ ತಾಯಿ ಬಳಿ ಬಂದು ನಿಂತ್ತಾಗ ಮೂರ್ಛೆಹೋಗಿದ್ದ...!

ಇಂದಿನ ಜಗತ್ತಿನಲ್ಲಿ ಫೋನ್ ಇಲ್ಲದೆ ಬದುಕಲು ಸಾಧ್ಯವಿಲ್ಲ, ಎಂದಾದರೂ ನೀವು ನಿಮ್ಮ ಮೊಬೈಲ್ ಬಳಕೆಯ ಬಗ್ಗೆ ನಿಗಾ ವಹಿಸಿದ್ದೀರ!?! ನಿಮಗೂ ಆಯುಷ್ ನಂತೆ ಮೊಬೈಲ್ ಬಿಟ್ಟು ಬದುಕಲು ಸಾಧ್ಯವಿಲ್ಲವೇ? ಒಮ್ಮೆ ಯೋಚಿಸಿ ನೋಡಿ. ನೋಮೊಫೋಬಿಯ ಎಂಬುದು "No+-Mobile+phone+Phobia"ಎಂಬ ಮಾನಸಿಕ ಖಾಯಿಲೆ. ಖಾಯಿಲೆ ಇರುವ ವ್ಯಕ್ತಿಗೆ ಆಯುಷ್ ನಂತೆ ತನ್ನ ಫೋನ್ ಬಿಟ್ಟಿರಲು ಸಾಧ್ಯವಿಲ್ಲ. ಪದೇ ಪದೇ ಫೋನ್ ಅನ್ನು ಗಮನಿಸುವುದು. ಪ್ರತೀ ಕ್ಷಣ ಅದರಲ್ಲೇ ಕಾರ್ಯನಿರತರಾಗುವುದು ಲಕ್ಷಣಗಳು.

ಸಂಶೋಧನೆಯ ಪ್ರಕಾರ 77% ಯುವ ಜನರು ಫೋನ್ ಇಲ್ಲದಿದ್ದರೆ ಚಡಪಡಿಸಿ ಆತಂಕಕ್ಕೊಳಗಾಗುತ್ತಾರೆ. ಇವರಲ್ಲಿ ಸಾಮಾನ್ಯವಾಗಿ ಟೆಕ್ನೋ ಸ್ಟೆಸ್ ಅಂದರೆ ಪ್ರತಿದಿನ ನಿರಂತರವಾಗಿ ಫೋನ್ ಅನ್ನು ಬಳಸುವುದರಿಂದ,ಮಾನಸಿಕ ಒತ್ತಡ ಹಾಗೂ 'ರಿಂಗ್ಸೈಟಿ" ಅಂದರೆ ಪದೇ ಪದೇ ಫೋನ್ ನಲ್ಲಿ ನೋಟಿಫಿಕೇಷನ್ ಅಥವಾ ಕರೆ ಬಂದ ಅನುಭವ ಆಗುವುದು ಕಂಡುಬರುತ್ತದೆ. ಕೊನೆಗೆ ಒತ್ತಡ, ಭಯ, ಖಿನ್ನತೆ, ರಕ್ತದೊತ್ತಡ ಇತರೆ ಖಾಯಿಲೆಗೆ ತುತ್ತಾಗುತ್ತಾರೆ. ಹಾಗಾಗಿ ನೀವು ನಿಮ್ಮ ಫೋನ್‌ಗೆ ಬಲಿಯಾಗದಿರಿ ಹಾಗೂ ಇತರರನ್ನೂ ಬಲಿಯಾಗದಂತೆ ಎಚ್ಚರಿಸಿ!!

– ಭಾರ್ಗವಿ.ಆರ್.ಶೆಟ್
III ಬಿ.ಎ

## ಈ ನಾದ ನಿನಾದ

ನೀನಾದೆನಾ ನಾ ಮರೆವ ಈ ಕ್ಷಣ ಏನುತ್ತ... ನಮ್ಮ ರೇಡಿಯೋ ನೀನಾದ ಐದನೇ ವರ್ಷದ ಸಂತಸ ಅಂಬೆಗಾಲು ಇಡುತ್ತ ಈಗ 6ನೇ ವರ್ಷಕ್ಕೆ ಕಾಲಿಡಲು ಅಣಿಯಾಗಿದೆ. ಈ ಐದು ವರ್ಷದಲ್ಲಿ ಸಾಧನೆಯ ಹಾದಿ ಭಿನ್ನವೆನ್ನಿಸಿದೆ

## ಗಣರಾಜ್ಯೋತ್ಸವದಲ್ಲಿ ನಮ್ಮವರು ಭಾಗಿ



ನಮ್ಮ ಕಾಲೇಜಿನ ಎನ್.ಸಿ.ಸಿ ಕೆಡೆಟ್ ಗಳಾದ ಶಾಮ್ ಪ್ರಸಾದ್ ಎಚ್ಪಿ, ಸ್ನೇಹ ಹಾಗೂ ಜತಿನ್ ಕೆವಿ ಜನವರಿ 26 ರ ಗಣರಾಜ್ಯೋತ್ಸವದ ಪರೇಡ್ ನಲ್ಲಿ ಭಾಗವಹಿಸಿದ್ದರು.ಕಾಲೇಜಿನ ಎಂಸಿಸಿ ಎಲ್ಲಿ ಸಾಧನೆ ಮಾಡುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಇವರಿಗೆ ಚಿಗುರು ಬಳಗದಿಂದ ಅಭಿನಂದನೆಗಳು.

## Congralutions ... Ph.D.



Name: Sateeshchandra S
Topic: Synthesis ,Growth and Structural Investigation of π – Conjugated Non Linear optical Materials
University: Tumkur University
Guide: Nandakumar M Shetti



Name: Mahesh Shetty
Topic: Volunatry Organization and Inclusive Rural Development
University: Tumkur University
Guide: Dr.A Jayakumar Shetty



Name: Nagaraj Poojari
Topic: Solar Energy and Environmental Sustainability: A Study of Dakshina Kannada District
University: Tumkur University
Guide: Prof. Vilas Kudrolkar

# ಇರಲಿ ನಮ್ಮೆಲ್ಲರ ನಡಿಗೆ ಸ್ವಚ್ಛತೆಯ ಕಡೆಗೆ

ಮನುಷ್ಯನು ತನ್ನ ಜೀವನದಲ್ಲಿ ತಾನು ಎಂತಹ ಮಹತ್ತರವಾದ ಸ್ಥಾನವನ್ನು ಅಲಂಕರಿಸಿದರೂ ಅವನಲ್ಲಿ ಸ್ವಚ್ಛತೆಯೇ ಇಲ್ಲ ಎಂದರೆ ಆತನ ಜೀವನವೇ ವ್ಯರ್ಥ. ಆದುದರಿಂದ ನಮ್ಮಲ್ಲಿ ಸ್ವಚ್ಛತೆಯನ್ನು ಕಾಪಾಡುವುದರೊಂದಿಗೆ ಸುತ್ತಲಿನ ಪರಿಸರ, ಸಮಾಜವನ್ನೂ ಸ್ವಚ್ಛತೆಯಿಂದಿಡಬೇಕು. ಶುಚಿತ್ವ ಎಂಬ ಕಲ್ಪನೆಯನ್ನು ನಮಗಾರು ಕಲಿಸಬೇಕೆಂದಿಲ್ಲ. ಅದು ನಮ್ಮಲ್ಲಿಯೇ ಸ್ವ ಇಚ್ಛೆಯಿಂದ ಮೂಡಬೇಕಾದ ಚಿಂತನೆ.

ಮಹಾತ್ಮ ಗಾಂಧೀಜಿಯವರು ಆಗಿನ ಕಾಲದಲ್ಲಿಯೇ ದೇಶದ ಸ್ವಚ್ಛತೆಯ ಕನಸನ್ನು ಕಂಡವರು. ಆ ಕನಸು ಸಾಕಾರಗೊಳ್ಳಲು ಮೊದಲ ಹೆಜ್ಜೆಯನ್ನಿಡಲು ನಮಗೆ ಇಷ್ಟು ವರ್ಷಗಳು ಬೇಕಾದವು ಎಂಬುದೇ ವಿಪರ್ಯಾಸ. 2014ರಲ್ಲಿ ನಮ್ಮ ಕೇಂದ್ರ ಸರಕಾರ ಸ್ವಚ್ಛ ಭಾರತ ಎಂಬ ಮಹಾನ್ ಯೋಜನೆಯನ್ನು ಜಾರಿಗೆ ತಂದು ದೇಶದ ಸ್ವಚ್ಛತೆ ಕಾಪಾಡಲು ಪಣತೊಟ್ಟಿತು. ಇಂದು ಇಡೀ ರಾಷ್ಟ್ರವೇ ಸ್ವಚ್ಛತೆ ಎಂಬ ಮೂಲ ಮಂತ್ರವನ್ನು ಪಟಿಸುತ್ತ ತನ್ನ ಗುರಿಯನ್ನು ಸ್ವಚ್ಛತೆಯ ಕಡೆ ನೆಟ್ಟಿದೆ. ಇಂದಾದರೂ ಗಾಂಧೀಜಿಯವರ ಕನಸು ನನಸಾಗುವತ್ತ ನಾವು ಮುಖಮಾಡಿದ್ದೇವೆ ಎಂಬುದೇ ಸಂತಸದ ಸಂಗತಿ.




ಇದು ಕೇವಲ ಸರಕಾರದಿಂದಲೋ, ರಾಷ್ಟ್ರ ನಾಯಕನಿಂದಲೋ, ಅಥವಾ ಒಬ್ಬ ವ್ಯಕ್ತಿಯಿಂದ ಆಗುವಂತಹ ಕಾರ್ಯ ಇದಲ್ಲ. ದೇಶದ ಸಮಸ್ತ ಜನರೂ ಕೂಡ ಸ್ವ ಇಚ್ಛೆಯಿಂದ ಕೈ ಜೋಡಿಸಬೇಕು. ಮುಖ್ಯವಾಗಿ ವಿದ್ಯಾರ್ಥಿಗಳಾದ ನಾವು ಇದರಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಪ್ರತಿ ನಿತ್ಯವೂ ನಾವು ನಡೆದಾಡುವಂತಹ ಶಾಲಾ ಕಾಲೇಜು, ರಸ್ತೆ ಬದಿ ಎಲ್ಲೆಂದರಲ್ಲಿ ಸ್ವಚ್ಛತೆ ಎದ್ದು ಕಾಣಬೇಕು. ಗ್ರಾಮಗಳಲ್ಲಿ ಗ್ರಾಮದ ಮುಖಂಡರು ಸ್ವಚ್ಛತೆಗೆ ಕರೆಯನ್ನು ನೀಡಬೇಕು. ಹೀಗೆ ಇದು ತಾಲ್ಲೂಕು, ಜಿಲ್ಲೆ, ರಾಜ್ಯಗಳಾದಿಯಾಗಿ ರಾಷ್ಟ್ರ ಮಟ್ಟದಲ್ಲಿ ಪ್ರತಿಧ್ವನಿಸುತ್ತದೆ. ನಾವಿರುವ ನಮ್ಮ ಸುತ್ತಮುತ್ತಲಿನ ವಾತಾವರಣದಿಂದಲೇ ಸ್ವಚ್ಛತೆಗೆ ಮನ್ನಣೆ ದೊರೆತರೆ ಅದು ರಾಷ್ಟ್ರವ್ಯಾಪಿ ಆಗುವುದುರಲ್ಲಿ ಅನುಮಾನವೇ ಇಲ್ಲ. ದೇಶದಲ್ಲಿ ನೂರಾರು ಕೋಟಿ ಜನರಿದ್ದೇವೆ. ನಾವು ನಮ್ಮ ದಿನದ ಕೆಲವು ಕ್ಷಣಗಳನ್ನು ಸ್ವಚ್ಛತೆಗೆ ಮೀಸಾಲಿಟ್ಟರೆ ವೈಯಕ್ತಿಕ ನೆಲೆಯಲ್ಲಿಯೂ ನಾವು ಸ್ವಚ್ಛತೆಯನ್ನು ಕಾಣಬಹುದು, ಪರಿಸರವನ್ನೂ, ಸಮಾಜವನ್ನೂ ಸ್ವಚ್ಛವಾಗಿಡಬಹುದು. ಆದುದರಿಂದ ಮಕ್ಕಳಿಂದ ಹಿಡಿದು ಹಿರಿಯರೆಲ್ಲರೂ ಈ ಕುರಿತು ಚಿಂತಿಸಬೇಕು. ಮಾಧ್ಯಮಗಳು, ಸಂಘ ಸಂಸ್ಥೆಗಳು ಇದರೊಂದಿಗೆ ಕೈ ಜೋಡಿಸಿದರೆ ಅದು ಖಂಡಿತವಾಗಿಯೂ ಯಶಸ್ಸಿನ ಹಾದಿಯನ್ನು ತುಳಿದು ಗುರಿತಲುಪುತ್ತದೆ. ಸ್ವಚ್ಛ ಪರಿಸರವಿದ್ದಲ್ಲಿ ಸುಂದರ ಬದುಕು ಖಂಡಿತವಾಗಿಯೂ ನೆಲೆಯೂರುತ್ತದೆ. ಹಾಗಾಗಿ ನಮ್ಮೆಲ್ಲರ ನಡಿಗೆಯು ಕೂಡ ಸ್ವಚ್ಛತೆಯೆಡೆಗೆ ಇರಲಿ ಎಂಬುದು ಆಶಯ.

– ಹರ್ಷಿತಾ ಎ ಬಿ
III ಬಿ.ಎ

# ವೆಬ್‌ಸೈಟ್ ಪ್ರಜೆಗಳಾಗೋಣ

ಪೌರತ್ವದ ಬಗ್ಗೆ ಚರ್ಚೆ ಆಗುತ್ತಿರುವ ಈ ಸಮಯದಲ್ಲಿ ಪ್ರಜೆಗಳಾಗಿ ಭಾರತದ ಅಭಿವೃದ್ಧಿಗೆ ನಮ್ಮ ಕೊಡುಗೆ ಏನು ಎಂಬುದು ಚಿಂತಿಸಬೇಕಾಗಿದೆ. ಮೂಲಭೂತ ಹಕ್ಕುಗಳ ಪ್ರಯೋಜನ ಪಡೆಯುವ ನಾವು ಅದೇ ರೀತಿಯಲ್ಲಿ ಮೂಲಭೂತ ಕರ್ತವ್ಯಗಳನ್ನು ಪಾಲಿಸಲು ಮರೆಯುತ್ತಿದ್ದೇವೆ.

ಪ್ರಜೆಗಳಾಗಿ ನಮ್ಮ ದೇಶದ ಆಗು ಹೋಗುಗಳಿಗೆ ಸ್ಪಂದಿಸಿದೆ, ಕಿವಿಕೊಡದೆ ಸ್ವಾರ್ಥಿಗಳಾಗುತ್ತಿದ್ದೇವೆ. ಅದರಲ್ಲೂ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿರುವುದರಿಂದ ಯುವಜನರ ಸಕ್ರಿಯ ಭಾಗವಹಿಸುವಿಕೆಯು ಅವಶ್ಯಕವಾಗಿದೆ. ತಂತ್ರಜ್ಞಾನ ಯುಗ ಎಂದು ಕರೆಯುವ ಈ ಹೊತ್ತಿನಲ್ಲಿ ಸರ್ಕಾರವೇ ಈ ಗವರ್ನೆನ್ಸ್ ಆಗಿ ಬದಲಾಗುತ್ತಿರುವ ಸಂದರ್ಭದಲ್ಲಿ ಪ್ರಜೆಗಳ ಸಕ್ರಿಯ ಭಾಗವಹಿಸುವಿಕೆಯ ಸ್ವರೂಪವು ಬದಲಾಗಬೇಕಿದೆ. ಇದಕ್ಕಾಗಿ ನಾವು ಯಾವುದೋ ದೊಡ್ಡ ಅಧ್ಯಯನ ಮಾಡಬೇಕಿಲ್ಲ,ಈಗಾಗಲೇ ನಾವು ಬಳಸುತ್ತಿರುವ ಮೊಬೈಲ್ ಅಥವಾ ಸಾಮಾಜಿಕ ಮಾಧ್ಯಮವನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಹೆಚ್ಚು ಉಪಯುಕ್ತವಾಗಲಿದೆ.




ಏಕೆಂದರೆ ಭಾರತದ ಒಟ್ಟು 130 ಕೋಟಿಗಿಂತಲೂ ಹೆಚ್ಚಿನ ಜನಸಂಖ್ಯೆಯಲ್ಲಿ 48.3 ಕೋಟಿ ಜನ ಸಕ್ರಿಯ ಅಂತರ್ಜಾಲ ಬಳಕೆದಾರರು ಇದ್ದಾರೆ ಎಂದು ಸಮೀಕ್ಷೆ ದೃಢೀಕರಿಸಿದೆ.

ಹೀಗಿರುವಾಗ ನಮ್ಮಲ್ಲಿ ಲಭ್ಯವಿರುವ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಬೇಕಾದ ಅಗತ್ಯ ಇದೆ. ನಮ್ಮಲ್ಲಿ ಅನೇಕರು ಸಾಮಾಜಿಕ ಮಾಧ್ಯಮಗಳಾದ ಫೇಸ್ಬುಕ್, ವಾಟ್ಸಾಪ್ ,ಇನ್ಸ್ಟಾಗ್ರಾಮ್ ಮುಂತಾದವುಗಳಲ್ಲಿ ಸಕ್ರಿಯರಾಗಿರುತ್ತಾರೆ, ಆದರೆ ಎಷ್ಟು ಜನರು My gov.in ಗಳಂತಹ ಸರ್ಕಾರದ ನೀತಿ–ನಿಯಮಗಳ ಕುರಿತಾದ ಮಾಹಿತಿ ತಿಳಿದುಕೊಳ್ಳುವಂತಹ ಆಪ್ ಬಳಸುವವರಿದ್ದಾರೆ ಎಂಬುದನ್ನು ಯೋಚಿಸಬೇಕು ಅದರಲ್ಲೂ ಯಾವುದಾದರೂ ಅನಾಚಾರ ಬೆಳಕಿಗೆ ಬಂದರೆ, ಒಂದೆರಡು ದಿನ ಸಾಮಾಜಿಕ ಮಾಧ್ಯಮಗಳಲ್ಲಿ ನಮ್ಮ ಅಸಮಾಧಾನವನ್ನು ಹೊರಹಾಕುತ್ತಾ, ಮೂರನೆಯದಿನ ತಣ್ಣಗಾಗುತ್ತವೆ.

ಅದರ ಬದಲು PMOPG.GOV.IN ಅಥವಾ PMOCITIZEN ಎಂಬ ವೆಬ್ಸೈಟ್ಗೆ ಭೇಟಿ ನೀಡಿ ನಮ್ಮ ಆಕ್ರೋಶವನ್ನು ಹೊರಹಾಕುವುದಷ್ಟೇ ಅಲ್ಲದೆ ಸಮಸ್ಯೆಗಳ ಕುರಿತು ನಮ್ಮ ಪರಿಹಾರಗಳನ್ನೆಲ್ಲ ಕೂಡ ನೇರ ಸರ್ಕಾರಕ್ಕೆ ಕಳುಹಿಸಬಹುದು. ಇವುಗಳು ನಮ್ಮ ಅಂಗೈಯಲ್ಲಿರುವ ಮೊಬೈಲ್ನಲ್ಲಿ ಮಾಡಬಹುದಾದ ಮಾದರಿಗಳಷ್ಟೇ ಇನ್ನು ಅನೇಕ ಸಾಧ್ಯತೆಗಳನ್ನು ಅನುಸರಿಸುತ್ತಾ ಉತ್ತಮ ಪ್ರಜೆಗಳಾಗೋಣ....

ಪ್ರಹಲ್ ಸಿದ್ದು
III ಬಿ.ಎ

# The saga of Love and Rage

The great fictional antagonist Ravan has always been considered as a person who was filled with Adharma. there are many versions of ramayana written in many languages considering the cultural influences. Ravan has always been detected as one of the ruthless villains the world has ever seen. But recently added the book raavan enemy of aryavarta written by Amish Tripathi. This is third book of Ramchandra series. The first two books were about Ram and Sita. Amish believes that every character in any book has a different story to tell apart from the story which is penned. He believe there are no heroes or villains. It depends on the reader to decide. This particular book change the perception of The reader about Ravan.

Ravan was very innocent boy but circumstances made him what he is today. In this book Ravan emerges out as a pirate, painter, musician, diplomatic, courageous, knowledgeable and strong leader. He had truly built the whole Lankan empire by his own worth. working at chilka for a few pennies to rising as the richest man in the world is one hell of a journey. Apart from this Ravan is also shown as a true lover Ravan's one true love Vedavathi. We come across this character in various versions of Ramayana where vedavathi curses Ravan or replaces Sita before her abduction by Ravan. but here is a kanyakumari but dies and her daughter is depicted as Sita in the book.

The whole book revolves around the rivalry of two great maharshis Vishwamitra and Vashishtafter reading the book what I thought is this 3 characters Ram Sita and Ravan were Innocents. The rivalry between these two maharishis ruined their lives and made Ravan as ultimate villain to Aryavrata.

In this book there is a Poem "The ballad of the sun and the earth" written by Ravan. He expresses




his undying love for Vedavathi in the poem. The character of kumbhakarna is portrayed so brilliantly. Kumbhakarna is very adorable since childhood. Prince Hairy and voluptuous body actually resemble cute small. He is a naga so he has extra two hands which always shook delightedly whenever he was very happy and dropped on when he was sad. Amish used Kumbakarna's character to express his views on Sabarimala issue.

overall the book is worth a read. Amish brought out the character of Ravan very well. The language in the book is lucid and suspense about the Vishnu still maintained in the book.

- Vinutha
III BA

# ಅರೆ! ಎಲ್ಲಿಂದ ಬಂತು ಈ ಇನ್ನೊಂದು ದಿನ?

ಮೊನ್ನೆ ನನ್ನ ಸ್ನೇಹಿತನೊಂದಿಗೆ ಬೆಟ್ ಕಟ್ಟಿದ್ದೆ. ನನ್ನ ಪುಣ್ಯಕ್ಕೆ ಅವನು ಸೋತ. ಸರಿ ಪಾರ್ಟಿ ಕೊಡೋ ಎಂದಾಗ "ಈ ಮಂತ್ 30ಕ್ಕೆ ಕೊಡ್ತೀನೀ" ಎಂದು ಕಿರುನಗೆ ಸೂಸುತ್ತ ಹೇಳಿದ. ಈ ತಿಂಗಳಲ್ಲಿ ಇರುವುದು 30 ದಿನಗಳಲ್ಲ 29 ದಿನಗಳಷ್ಟೇ ಎಂದು ನನ್ನ ಮಂಕು ಮಂಡೆಗೆ ಹೊಳೆದದ್ದು ಅರ್ಧ ಗಂಟೆಯ ನಂತರವೇ!!

ಆಗಲೇ ನನ್ನ ತಲೆಗೆ ಈ ವಿಷಯ ಹುಳುವಿನಂತೆ ಹೊಕ್ಕಿದ್ದು. ಸಾಧರಣವಾಗಿ 28 ದಿನಗಳಿರುವ ಫೆಬ್ರವರಿಯಲ್ಲಿ 4 ವರ್ಷಕ್ಕೊಮ್ಮೆ 1 ದಿನ ಹೆಚ್ಚಾಗಿ ಬರುವುದು ಯಾಕೆ? ಅರೆ! ಎಲ್ಲಿಂದ ಬಂತು ಈ ಇನ್ನೊಂದು ದಿನ?

ನಮ್ಮ ಭೂಮಿ ತನ್ನ ಸುತ್ತ ತಾನು ತಿರುಗುವುದಲ್ಲದೆ ಸೂರ್ಯನ ಸುತ್ತಲೂ ಸುತ್ತುತ್ತದೆನ್ನುವುದು ನಮಗೆಲ್ಲರಿಗೂ ತಿಳಿದಿದೆ. ಒಂದು ದಿನಕ್ಕೆ 24 ಗಂಟೆಗಳೆಂತಲೂ ವರ್ಷಕ್ಕೆ 365 ದಿನಗಳೆಂತಲೂ ನಮಗೆ ಗೊತ್ತು. ಸ್ವಲ್ಪ ನಿಲ್ಲಿ! ಭೂಮಿ ಸೂರ್ಯನ ಸುತ್ತ ಸುತ್ತಲು ತೆಗೆದುಕೊಳ್ಳುವುದು 365 ದಿನಗಳಲ್ಲ, ನಿಖರವಾಗಿ ಹೇಳಬೇಕೆಂದರೆ ಒಂದು ವರ್ಷಕ್ಕೆ 365ದಿನ 5ಗಂಟೆ 48ನಿಮಿಷ 46 ಸೆಕೆಂಡುಗಳಂತೆ!! ಅಂದರೆ ಒಂದು ವರ್ಷಕ್ಕೆ 6ಗಂಟೆಗಳ ಹೆಚ್ಚುವರಿ. ನಾಲ್ಕು ವರ್ಷಗಳಲ್ಲಿ ಈ ಹೆಚ್ಚುವರಿ




ಗಂಟೆಗಳನ್ನು ಸೇರಿಸಿದರೆ ಅದು ಅಂದಾಜು ಒಂದು ದಿನದಷ್ಟಾಗುತ್ತದೆ. ಅದನ್ನ ಕಡಿಮೆ ದಿನಗಳಿರುವ ಕಾರಣಕ್ಕೆ ಫೆಬ್ರವರಿಯಲ್ಲಿ ಸೇ–ರಿಸಲಾಗುತ್ತದೆ. ಆದ್ದರಿಂದಲೇ 4ರಿಂದ ಭಾಗವಾಗುವ ಇಸವಿಗಳಲ್ಲಿನ ಫೆಬ್ರವರಿಯಲ್ಲಿ 29ದಿನಗಳಿರಲಿದ್ದು, 366 ದಿನವನ್ನೊಂದಿ ಅದು ಅಧಿಕ ವರ್ಷವೆಂದೂ ಕರೆಸಿಕೊಳ್ಳುತ್ತದೆ. ಈ ಕಾರಣದಿಂದಾಗಿಯೇ ಈ ವರ್ಷದ ಫೆಬ್ರವರಿಯಲ್ಲೂ ಆ ಒಂದು ಹೆಚ್ಚಿನ ದಿನವೂ ಇದೇ. ಈ ವಿಶೇಷ ದಿನದಂದೇ ಈ ವರ್ಷದ ನಮ್ಮ ಕಾಲೇಜು ವಾರ್ಷಿಕೋತ್ಸವವೂ ಜರುಗಿದ್ದು ವಿಶೇಷ ದಿನದ ವಿಶೇಷ.

– ಮಂಜುನಾಥ್.ಜಿ.ಎಮ್
III ಬಿ.ಎ

ಆಕಾಂಕ್ಷೆ ಯಾವುದನ್ನೂ ಬದಲಿಸುವುದಿಲ್ಲ. ಆದರೆ, ಬದ್ಧತೆ ಎಲ್ಲವನ್ನೂ ಬದಲಿಸುತ್ತದೆ

# Championship......

## Runnersup

| DEPARTMENT | EVENT | PRIZES | PLACE |
|---|---|---|---|
| MATHMATICS | Various completions | Over all champions | St.Aloysius college,Magalore |
| CHEMISTRY | Decennium - 2020<br>Imprint's 2020 | Over all champions<br>- Runners | St.Aloysius college, Magalore |
| HINDI | Umang 2020 | Runners | Alva`college ,Moodabidre |
| SANSKRITH | Bhagavadgeeta Kantaphata | I[st] Prize | Vivekananda college ,puttur |
| BIOTECH | Chaimura 2020<br>Mpdel making | II[nd] Prize | St.Aloysius college,Magalore |
| JOURNALISM | Midea vivek<br>- Art Beat | Over all champions<br>- Over all champions | Vivekananda college ,puttur<br>St.Aloysius college,Magalore |
| ECONOMICS | Econovanza 2019 | Over all champions | Vivekananda college ,puttur |

## ರಂಗಸ್ಥಳ

ಕಲೆಗೆ ಪ್ರೇಕ್ಷಕನು ಮೂಕವಿಸ್ಮಿತನಾಗಿ ಸಾಕ್ಷಿಯಾಗಲು ಸಿಗುವ ವೇದಿಕೆಯೇ ರಂಗಸ್ಥಳ. ಅಂತಹ ರಂಗಸ್ಥಳ ನಮ್ಮ ಕಾಲೇಜಿನಲ್ಲಿ ಇದೆ. ವಿಶೇಷವೆಂದರೆ ಇದು ಒಂದು ಬಯಲು ರಂಗಮಂದಿರ, ಅದೇ ನಮ್ಮ ನೆಚ್ಚಿನ ವನರಂಗ.



ಮಾತೃಶ್ರೀ ಹೇಮಾವತಿ ಅಮ್ಮನವರ ಆಶ್ರಯದಲ್ಲಿ ಮೂಡಿಬಂದಿರುವ ಈ ವನರಂಗವು ಕಲೆಗೆ ಹಾಗೂ ಕಲಾಸಕ್ತರ ಪ್ರೋತ್ಸಾಹಕ್ಕೆ ಮೀಸಲು. ಭಾರತದ ಸಂಸ್ಕೃತಿ ಇಂದಿಗೂ ಉಳಿದಿರುವುದಕ್ಕೆ ಕಾರಣ ಕಲಾವಿದರು. ಡಿಸೆಂಬರ್ 9ರಂದು ವನರಂಗ ಉದ್ಘಾಟಿಸಿ, ವಿದ್ಯಾದಾನ ಮಾಡುವುದರ ಜೊತೆಗೆ ಕಲೆಯನ್ನು ಪ್ರೋತ್ಸಾಹಿಸುವ ಡಾ.ಡಿ ವೀರೇಂದ್ರ ಹೆಗ್ಗಡೆಯವರು ವನರಂಗದಲ್ಲಿ ವಿಶೇಷ ಕಾಳಜಿಯನ್ನು ವಹಿಸಿದ್ದಾರೆ ಅವರ ಇಚ್ಛೆಯಂತೆ ವನರಂಗವು ಗ್ರೀಕ್ ಮಾದರಿಯ ಆಂಫಿಥಿಯೇಟರ್ ಶೈಲಿಯಲ್ಲಿ  ನಿರ್ಮಾಣವಾಗಿದೆ .
ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಜನಸಾಮಾನ್ಯರಿಗೆ ಇಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಅವಕಾಶವಿದೆ.ನಾಟಕಗಳು ಪ್ರದರ್ಶನಗೊಂಡಿದ್ದು ಆಕರ್ಷಕವಾಗಿ ಮೂಡಿ ಬಂದಿದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ವನರಂಗ ಸಹಾಯಕವಾಗಲಿದೆ. ಎಲ್ಲಾ ಕಲಾಸಕ್ತರು ವನರಂಗದ ಪ್ರಯೋಜನವನ್ನು  ಪಡೆದುಕೊಳ್ಳೋಣ.

## ಎಸ್.ಡಿ.ಎಂ ಅಂಗಳದಲ್ಲಿ ವಿನೂತನ ಆಹಾರೋತ್ಸವ

ಉಜಿರೆ ಶ್ರೀ.ಧ.ಮಂ. ಕಾಲೇಜಿನ ಗೃಹ ವಿಜ್ಞಾನ ವಿಭಾಗದಿಂದ "ಫುಡ್ ಕಾರ್ನರ್" ಎಂಬ ವಿನೂತನ ಆಹಾರ ಉತ್ಸವವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮಹಾವೀರ ಕಾಲೇಜಿನ ಪ್ರಾಧ್ಯಪಕ ಡಾ. ರಾಧಾಕೃಷ್ಣ ಆಗಮಿಸಿದ್ದರು. ಆಹರೋತ್ಸವದಲ್ಲಿ ವಿದ್ಯಾರ್ಥಿಗಳು ತಾವೇ ತಯಾರಿಸಿದ ಉತ್ಕೃಷ್ಟ ಗುಣಮಟ್ಟದ ವಿವಿಧ ಖಾದ್ಯಗಳನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುವ ಮೂಲಕ ಆದಾಯ ಗಳಿಸಿ ಖುಷಿಪಟ್ಟರೆ ಆಗಮಿಸಿದ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ರುಚಿಕರವಾದ ಖಾದ್ಯಗಳ ಸೇವನೆಯಿಂದ ತೃಪ್ತಿಪಟ್ಟರು.

## ***Hobbies***ಗಳ ಹಬ್ಬ

ಹಾಬೀಸ್ ಸರ್ಕಲ್ ಎಂಬ ವಿನೂತನ ಕಾರ್ಯಕ್ರಮ ದಿಂದ ವಿದ್ಯಾರ್ಥಿಗಳು ತಮ್ಮ ಹವ್ಯಾಸಗಳನ್ನು ಪ್ರದರ್ಶಿಸುವ ವಿನೂತನ ಕಾರ್ಯಕ್ರಮ ನಡೆಯಿತು.

## ಅಭಿನಂದನೆಗಳು

ಈ ವರ್ಷದ ಕಾಲೇಜ್ ಡೇ ಸಂಭದಿಸಿದಂತೆ ವಿವಿಧ ಸ್ಪರ್ಧೆಗಳಲ್ಲಿ ತೃತೀಯ ಬಿ.ಎ ವಿದ್ಯಾರ್ಥಿನಿ ಭಾರ್ಗವಿ ಅರ್.ಶೆಟ್ 8 ಪ್ರಶಸ್ತಿಗಳನ್ನು ತನ್ನದಾಗಿಸಿ ಕೊಳ್ಳುವ ಮೂಲಕ ಅಭಿನಂದನೆಗೆ ಪಾತ್ರಳಾಗಿದ್ದಾಳೆ.

# "ಉದ್ಯಮವಾಗಿ ಮಾರ್ಪಾಡು ಕೊಳ್ಳುತ್ತಿದೆಯೇ ಕನ್ನಡ ಪತ್ರಿಕೋದ್ಯಮ"

ಭಾರತದಲ್ಲಿ ಪತ್ರಿಕೆಗಳಿಗೆ ಸುಮಾರು 200 ವರ್ಷಗಳಷ್ಟು ಇತಿಹಾಸವಿದೆ. ಅಂದಿನಿಂದ ಇಂದಿನವರೆಗೆ ಪತ್ರಿಕಾರಂಗ ಬಹುದೊಡ್ಡ ಬದಲಾವಣೆಗೆ ಕಾರಣವಾಗಿದೆ. ಪತ್ರಿಕೋದ್ಯಮ ಸ್ವಾತಂತ್ರದ ಕಾಲದ ಚಳುವಳಿಯಲ್ಲಿ ತನ್ನ ಪಾತ್ರವನ್ನು ನಿರ್ವಹಿಸಿತು. ದೇಶದಲ್ಲಿ ಪ್ರಾದೇಶಿಕವಾಗಿ ಆಯಾ ಭಾಷಾವಾರು ಪ್ರಾಂತ್ಯಗಳಲ್ಲಿ ಪತ್ರಿಕೋದ್ಯಮವು ಬೆಳೆದುಬಂದಿತು. ಕನ್ನಡ ಪತ್ರಿಕೋದ್ಯಮದ ಪಿತಾಮಹ ಹರ್ಮನ್ ಮೊಗ್ಲಿಂಗ್. ಕನ್ನಡದ ಮೊದಲ ಪತ್ರಿಕೆ "ಮಂಗಳೂರ ಸಮಾಚಾರ"ವನ್ನು ಹೊರತಂದನು. ಇದು ಕನ್ನಡ ಪತ್ರಿಕೋದ್ಯಮಕ್ಕೆ ಅಡಿಪಾಯವಾಯಿತು.

ಜಾಗತೀಕರಣದಿಂದಾಗಿ ಪ್ರಸ್ತುತ ದಿನಗಳಲ್ಲಿ ಪತ್ರಿಕೋದ್ಯಮ ಒಂದು ಉದ್ಯಮವಾಗಿ ಮಾರ್ಪಾಡಾಗುತ್ತಿದೆ. ಇದೇ ಕಾರಣದಿಂದ ಪತ್ರಿಕೆಗಳು ಉದ್ಯಮವಾಗಿ ಮಾರ್ಪಾಡು ಹೊಂದಿ ಸೇವಾ ಮನೋಭಾವಕ್ಕೆ ಎಳ್ಳುನೀರು ಬಿಟ್ಟಿವೆ. ದೇಶದಲ್ಲಿರುವ ಬಡಜನರ, ಶೋಷಣೆಗೆ ಒಳಗಾದ ಕಥೆಯನ್ನು ಬಿತ್ತ-ರಿಸುತ್ತಿದ್ದ ಮಾಧ್ಯಮವು ಈಗ ಪ್ರಭಾವಿ ಜನರ ಜೀವನವನ್ನು, ಭೂಗತಲೋಕದ ಜಗತ್ತನ್ನು ಹೀಗೆ ಹಲವಾರು ರೀತಿಯ ವಿಷಯವನ್ನು ಪ್ರಕಟಿಸಲು ಪ್ರಾರಂಭಿಸಿತು. "ಮೊದಲು ಪತ್ರಿಕೋದ್ಯಮ ಇತ್ತು ಆದರೆ ಈಗ ಅದು ಪತ್ರಿಕಾ ಉದ್ಯಮವಾಗಿದೆ". ಭಾರತವು ಸಮಸ್ಯೆಗಳಿಂದ




ಕೂಡಿದಂತಹ, ಅಭಿವೃದ್ಧಿಯನ್ನು ಹೊಂದುತ್ತಿರುವ ದೇಶವೆಂದು ಕರೆಯುತ್ತಿದ್ದ ಸಂದರ್ಭದಲ್ಲಿ ಇದನ್ನು ಮರೆಮಾಚುವ ಕೆಲಸ ಮಾಧ್ಯಮಗಳು ಮಾಡಿದರು. ಸಮಾಜದ ಮತ್ತು ಸರ್ಕಾರದ ನಡುವೆ ಸೇತುವೆಯಂತೆ ಇದ್ದ ಇದೇ ಮಾಧ್ಯಮಗಳು ತಮ್ಮ ಜವಾಬ್ದಾ-ರಿಯಿಂದ ಜಾರಿಕೊಂಡು ಪತ್ರಿಕೆಗಳು ಮತ್ತು ಮಾಧ್ಯಮಗಳು ಯಾರಿಗಾಗಿ, ಯಾವುದಕ್ಕಾಗಿ ಎನ್ನುವ ಪ್ರಶ್ನೆ ಜನರಲ್ಲಿ ಮೂಡುವಂತೆ ಮಾಡಿದವು. ಸುದ್ದಿ ಮಾಧ್ಯಮವಂತೂ ಮಾಧ್ಯಮದ ಆಶಯಗಳನ್ನು ಇನ್ನಷ್ಟು ವಿರುದ್ಧ ದಿಕ್ಕಿಗೆ ಕೊಂಡೊಯ್ಯುತ್ತಿದೆ. ಪತ್ರಿಕಾರಂಗವಾಗಲಿ ಮಾಧ್ಯಮಗಳಾಗಲಿ ಯಾವುದೋ ರಾಜ-ಕೀಯ ಪಕ್ಷದ ರಾಜಕಾರಣಿಗಳ ಮತ್ತು ಪ್ರಭಾವಿ ವ್ಯಕ್ತಿಗಳ ಕೈಗೊಂಬೆಗಳಂತಾಗಬಾರದು.

ಇಂದು ಪತ್ರಿಕಾರಂಗವಾಗಲಿ ಅಥವಾ ಮಾಧ್ಯಮವಾಗಲಿ ಒಂದು ಉದ್ಯಮವನ್ನಾಗಿ ತಮ್ಮನ್ನು ತಾವು ರೂಪಿಸುಕೊಳ್ಳುತ್ತಿರುವುದನ್ನು ನಾವು ಕಾಣಬಹುದು. ಇಂತಹ ಕಾರ್ಯದಿಂದ ನಮ್ಮ ಪತ್ರಿಕಾ ರಂಗವು ಆದಷ್ಟು ದೂರವಿದ್ದು ಯಾವುದೇ ಕಲ್ಮಶಗಳಿಲ್ಲದೆ ಜನರಿಗೆ ಎಲ್ಲಾ ರೀತಿಯಲ್ಲೂ ಮಾರ್ಗದರ್ಶಕರಾಗಿ ಮತ್ತು ಪೂರಕವಾಗಿ ಸುದ್ದಿಯ ನೈಜ ಚಿತ್ರಣವನ್ನು ಪ್ರಕಟಿಸಿದರೆ ಮಾತ್ರ ಪತ್ರಿಕಾರಂಗದ ಅಸ್ತಿತ್ವವನ್ನು ಹಾಗೂ ಗೌರವನ್ನು ಉಳಿಸಲು ಸಾಧ್ಯ ಎನ್ನುವುದನ್ನು ಮರೆಯದಿರೋಣ.

– ಮಹೇಶ್
III ಬಿ. ಎ

# ಅನುಭವಗಳ ಗುಚ್ಛಗಳೊಂದಿಗೆ ಬಸ್ಸಿನ ಪ್ರಯಾಣ

ಆಹಾ..! ಬಸ್ಸಿನಲ್ಲಿ ಪ್ರಯಾಣ ಎಂದರೆ ಏನೋ ಒಂದು ರೀತಿಯ ಮಜಾ. ಸಂತೋಷ, ಆನಂದಗಳ ಜೊತೆಗೆ ಹೊಸ-ಹೊಸ ಅನುಭವಗಳ ತಾಣ. ಊರಿನಿಂದ ಯಾವುದೇ ಊರಿಗೆ ಹೋಗುವ ಜನ, ಪರಿಚಯವಿಲ್ಲದ ಅಪರಿಚಿತ ವ್ಯಕ್ತಿಗಳ ಜೊತೆಗೆ ನಮ್ಮ ಪ್ರಯಾಣ. ಎಲ್ಲರ ದಾರಿ ಒಂದೇ, ಎಲ್ಲರೂ ಪ್ರಯಾಣಿಸುವ ವಾಹನ ಒಂದೇ, ಆದರೆ ಇಳಿಯುವ ತಾಣ ಬೇರೆ ಬೇರೆ. ಅಷ್ಟೇ...

ಬಸ್ಸಿನಲ್ಲಿ ಅಪರಿಚಿತ ವ್ಯಕ್ತಿಗಳು ಪರಿಚಿತರಾಗುತ್ತಾರೆ, ಸ್ನೇಹಿರಾಗುತ್ತಾರೆ, ಆತ್ಮೀಯರಾಗುತ್ತಾರೆ. ಕೆಲವರ ಪ್ರೇಮ ಪ್ರಯಾಣಗಳು ಬಸ್ಸಿನಲ್ಲೇ ಆರಂಭವಾಗುತ್ತದೆ. ಪ್ರೇಮಿಗಳ ಪ್ರಣಯ ಒಂದು ಕಡೆಯಾದರೆ ಮತ್ತೊಂದೆಡೆ ಪ್ರೇಮಕ್ಕಿಂತ ಸ್ನೇಹನೇ ಬೆಸ್ಟ್ ಎಂಬಂತೆ ಲಾಸ್ಟ್ ಸೀಟ್‌ನಲ್ಲಿ ತಮ್ಮದೇ ಸಾಮ್ರಾಜ್ಯವನ್ನು ಸೃಷ್ಟಿಸುವ ಗೆಳೆಯರ ಬಳಗ. ಮೋಜು, ಮಸ್ತಿ, ತಲೆಹರಟೆ ಮಾತುಗಳನ್ನು ಆಡುವ ಬಿಂದಾಸ್ ಆಗಿರುವ ಜಾಲಿ ಗೈಸ್. ಕೆಲಸಕ್ಕೆ ತಡವಾಯಿತು ಅಥವಾ ಮನೆಗೆ ಯಾವಾಗ ತಲುಪುತ್ತೇನೆ ಎಂದು ತಡವ-ರಿಸುವ ದುಡಿಮೆಯ ಜನರು. ಈ ಎಲ್ಲದರ ನಡುವೆ ಶಾಲೆ ಬಿಟ್ಟ ತಕ್ಷಣ ಓಡಿ ಬರುವ ಪುಟಾಣಿ ಮಕ್ಕಳು. ಮಕ್ಕಳಿಗಿಂತ ಅವರ ಬ್ಯಾಗ್ ದೊಡ್ಡದಾಗಿರುತ್ತದೆ. ಬ್ಯಾಗ್ ಅನ್ನು ಅವರು ಹಾಕುತ್ತಾರೋ ಅಥವಾ ಬ್ಯಾಗಿಗೆ ಅವರನ್ನು ಹಾಕಿಕೊಳ್ಳುತ್ತಾರೋ ಗೊತ್ತಾಗುವುದಿಲ್ಲ. ಬಸ್ಸಲ್ಲಿ ಕುಳಿತವರ ಕೈಗೆ ಬ್ಯಾಗ್ ಕೊಟ್ಟು ತಮ್ಮ ಸಹಪಾಠಿಗಳ ಜೊತೆ ಕ್ಲಾಸಿನಲ್ಲಿ ಆದ ವಿಷಯಗಳನ್ನು ಹಂಚಿಕೊಳ್ಳುತ್ತ, ಕಿಲಕಿಲ ಎಂದು ನಗುತ್ತಾ ನಿಂತು ಬಿಡುತ್ತಾರೆ.




ಇನ್ನೂ ಉತ್ತರ ಕರ್ನಾಟಕದ ಘಾಟಿ ಜನ ಮೊಬೈಲ್‌ನಲ್ಲಿ ಮಾತನಾಡುವಾಗ ಅವರ ಮಾತಗಳು ಮೊಬೈಲ್‌ನಲ್ಲಿ ಮಾತನಾಡುವವ-ರಿಗೆ ಕೇಳುಸುತ್ತದೆಯೋ ಇಲ್ಲವೊ ಗೊತ್ತಿಲ್ಲ ಆದರೆ ಬಸ್ಸಿನಲ್ಲಿ ಕುಳಿತವರಿಗಂತೂ ಚೆನ್ನಾಗಿ ಕೇಳುಸುತ್ತದೆ. ಇನ್ನು ಕೆಲವು ಹುಡುಗರಂತೂ ಬಸ್ಸಿನ ಬಾಗಿಲಿನಲ್ಲಿ ನಿಂತು ಬಾವಲಿಯಂತೆ ನೇತಾಡುತ್ತಿರುತ್ತಾರೆ.

ಇಷ್ಟೆಲ್ಲ ಘಟನೆಗಳು ನಡೆಯುತ್ತಿದ್ದರು ನನಗೂ ಈ ಬಸ್ಸಿಗೂ ಯಾವುದೇ ಸಂಬಂಧ ಇಲ್ಲ ಎಂಬಂತೆ ತನ್ನ ಪಾಡಿಗೆ ಮೊಬೈಲ್ ಹಿಡಿದುಕೊಂಡು ಕುಳಿತುಕೊಳ್ಳುವ ವ್ಯಕ್ತಿಗಳು ಕೂಡ ನಮಗೆ ಬಸ್ಸಿನಲ್ಲಿ ಸಿಗುತ್ತಾರೆ. ಅಪರಿಚಿತ ವ್ಯಕ್ತಿಗಳು ಮಾತನಾಡುತ್ತಾ-ಆಡುತ್ತಾ ಆತ್ಮೀಯರಾಗಿ ಬಿಡುತ್ತಾರೆ. ಈ ಎಲ್ಲ ಅನುಭವಗಳು ನಮಗೆ ಸಿಗುವುದು ಬಸ್ಸಿನಲ್ಲಿ ಪ್ರಯಾಣಿಸಿದಾಗ ಮಾತ್ರ ,ಕಾರು ಬೈಕಿನಲ್ಲಿ ಪ್ರಯಾಣಿಸಿದಾಗ ಸಿಗಲ್ಲ. ಬಸ್ಸಿನ ಪ್ರಯಾಣ ನಮಗೆ ಹಲವು ಪಾಠಗಳನ್ನೂ ಕಲಿಸಿಕೊಡುತ್ತದೆ. ಹೊರಜಗತ್ತಿನ ಅದ್ಭುತ ಪರಿಚಯ ನಮಗಾಗುವುದು ಬಸ್ಸುಗಳಲ್ಲಿಯೇ. "ಅನುಭವ ಸವಿಯಲ್ಲ ಅದರ ನೆನಪೆ ಸವಿ" ಎಂಬ ಮಾತನ್ನು ಒಪ್ಪುವುದಾದರೆ ಬಸ್ಸಿನ ಅನುಭವಗಳೂ ಸ್ಮರಣೀಯ.

– ಮಮತಾ
III ಬಿ.ಎ

## plenty of opportunity

It's a wonderful journey so far to me SDM is a source for me to become the best out of best of myself. It as given plenty of opportunity to to explore my skills knowledge and overall development.SDM is meant for discipline and it has taught me to I am in the last few months of my degree life what to Atlee thank esteem for all good things it has given me and made me to ful honour for studying year thank you for everyone SDM.

- Karthik pai
III B.com

## ಧೈರ್ಯ ಹೇಳಿಕೊಟ್ಟಿದೆ

ಪಿಯುಸಿ ಮುಗಿದ ಬಳಿಕ ಮುಂದೇನು ? ಎಂಬ ಪ್ರಶ್ನೆಗೆ ಉತ್ತರ ಎಸ್.ಡಿ.ಎಂ ಆಯ್ಕೆ ಮಾಡಿಕೊಂಡೆ ಎಸ್.ಡಿ.ಎಮ್ ಕಾಲೇಜು ನನ್ನ ವ್ಯಕ್ತಿತ್ವ ಬೆಳವಣಿಗೆಗೆ ತುಂಬಾ ಉಪಕಾರ ಮಾಡಿದೆ .ನನ್ನ ಜೀವನದ ಬಹು ಮುಖ್ಯ ಘಟ್ಟದಲ್ಲಿ. ಎಸ್.ಡಿ.ಎಂ ನನ್ನ ಜೊತೆ ಇದೆ ಅನ್ನುವುದೇ ಖುಷಿ ವಿಚಾರ ಪದವಿ ಜೀವನವನ್ನು ಯಾವ ರೀತಿ ಉಪಯೋಗಿಸಬೇಕು ಯಾವ ರೀತಿಯ ಸಮಸ್ಯೆಗಳನ್ನು ಆದರೂ ಎದುರಿಸಬೇಕು ಎದುರಿಸು ಎದುರಿಸಬಹುದು ಎಂಬ ಧೈರ್ಯ ಹೇಳಿಕೊಟ್ಟಿದೆ

– ಶ್ರೇಯಾಂಕ್
III ಬಿ.ಎಸ್ಸಿ

## ದಿಕ್ಸೂಚಿ ಆಗಲಿದೆ

ಎಸ್.ಡಿ.ಎಮ್ ಕಾಲೇಜು ನೆನಪಿನ ಬುತ್ತಿಯ ಮಹಾಸಾಗರದಲ್ಲಿ ಮೊದಲನೆಯದು ಹಿಸ್ಟರಿ ಎಲ್ಲದರಲ್ಲೂ ಮುಂದು ಇಲ್ಲಿ ಪಠ್ಯೇತರ ಚಟುವಟಿಕೆಗಳಿಗೂ ಪ್ರಾಮುಖ್ಯತೆ ಮಾಡುವುದರಿಂದ ವಿದ್ಯಾರ್ಥಿಗಳಿಗೆ ತಮ್ಮ ಕೌಶಲ್ಯಗಳ ಅರಿವಿಗೆ ಬಂದು ಅದರಲ್ಲಿ ಮುಂದುವರಿಯಲು ದಿಕ್ಸೂಚಿ ಆಗಲಿದೆ ಮತ್ತು ಬದುಕಿನ ಮೌಲ್ಯಗಳನ್ನು ಕಟ್ಟಿಕೊಡುವುದರಲ್ಲಿ ಎಸ್.ಡಿ. ಎಮ್ ಪ್ರಮುಖ ಪಾತ್ರ ವಹಿಸುತ್ತದೆ

– ಜೆವಿನ್ ನಾಣಯ್ಯ
III ಬಿ.ಸಿ.ಎ




## ಕಾಲೇಜಿಗೆ ಥ್ಯಾಂಕ್ಸ್

ನಮ್ಮ ಕಾಲೇಜು ಕನಸುಗಳ ಆದರೆ ಇಲ್ಲಿ ಒಬ್ಬ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಗೆ ಏನು ಬೇಕೋ ಎಲ್ಲವನ್ನೂ ನೀಡುತ್ತದೆ ಕಾಲೇಜಿನಲ್ಲಿ ಗೋಲ್ಡನ್ ಲೈಫ್ ಇಸ್ ಗೋಲ್ಡನ್ ಲೈಫ್ ಅಂತ ಅನಿಸಲು ಶುರುವಾಗಿದ್ದು ಎಟಿಎಂನಲ್ಲಿ ಮಾತ್ರ ಫ್ರೆಂಡ್ಸ್ ಮತ್ತು ಗುರುಗಳು ಎಲ್ಲರೂ ತುಂಬಾ ಸಹಕಾರ ಕೊಟ್ಟು ಸಕಾಲದಲ್ಲಿ ನಮ್ಮ ಜೊತೆಗಿದ್ದು ಗುರುಗಳು ಫ್ರೆಂಡ್ಸ್ ಗಳ ಆದರೂ ಫ್ರೆಂಡ್ಸ್ ಗಳು ಗುರುಗಳಾದರು ಎಲ್ಲರಿಗೂ ತುಂಬು ಹೃದಯದ ಧನ್ಯವಾದಗಳು ಮೊದಲನೆಯದಾಗಿ ಕಾಲೇಜಿಗೂ ಥ್ಯಾಂಕ್ಸ್.

– ದಿಲಿಪ್
III ಬಿ.ಬಿ.ಎ

## ನಮ್ಮನ್ನು ಹರಸಿದರು

ಕಾಲೇಜು ಜೀವನವೆಂದರೆ ನಿರ್ಲಕ್ಷ್ಯ ಬೇಜವಾಬ್ದಾ-ರಿಯಿಂದ ಕೂಡಿರುತ್ತದೆ ಎಂಬ ಮಾತಿಗೆ ಬರುವಂತೆ ದೇವಸ್ಥಾನದ ವಾತಾವರಣದಿಂದ ಎಸ್ಡಿಎಂ ಕಾಲೇಜ್ ವಾತಾವರಣದ ದೆಸೆಯಿಂದ ಹುಟ್ಟಿದ ಶ್ರದ್ಧೆ ಭಕ್ತಿಗಳು ನಮ್ಮನ್ನು ಗುರಿಗೆ ತಲುಪುವ ಹಾದಿಯನ್ನು ಬಿಡದಂತೆ ಯಾವುದು ಆಕರ್ಷಣೆಗಳಿಗೆ ಒಳಗಾಗದಂತೆ ನಮ್ಮನ್ನು ಒಂದೆಡೆ ಕಾಪಾಡಿದರೆ ಹಾದಿಯನ್ನು ಬೀಳುವ ಪ್ರಮೇಯವೇ ಬಾರದಂತೆ ನಮ್ಮ ಪ್ರೀತಿಯ ಗುರುಗಳು ಕುದುರೆಗೆ ಕಟ್ಟುವ ಕಣ್ಣಾಕಪು ನಂತೆ ನಮ್ಮ ಗುರಿ ಸಾಧನೆಯ ಸಾಧನೆಗಾಗಿ ಗುರಿ ರಕ್ಷಾ ಕವಚವಾಗಿ ನಮ್ಮನ್ನು ಹರಸಿದರು.

– ಲೇಖನ್
III ಬಿ.ಕಾಂ

## College Made A Difference

My admittance to S.D.M. was a golden ticket to a college nicknamed "pilgrim", where learning from noble professors and being mentored by paradigm-changing guides were normal. A little thing called an "endowment" made a change. I seem to have grown up, to be a young adult, itching to contribute something meaningful. My college has transformed my flimsy desire to become a therapist into a fiery passionate leader in the field of Psychology.

- RajaRam
III B.sc

## ಕನಸು ನನಸಾದಾಗ

ಗಣರಾಜ್ಯ ಪರೇಡ್‌ನ ಕನಸು ಶುರುವಾಗಿದ್ದು 9ನೇ ತರಗತಿಯಲ್ಲಿ. ಮೊದಲ ಪ್ರಯತ್ನದಲ್ಲಿ ಸೋತೆ. ಮತ್ತೆ 12ನೆ ತರಗತಿಯಲ್ಲಿ ನವ ಸೈನಿಕ್ ಶಿಬಿರಕ್ಕೆ ಪ್ರಯತ್ನಿಸಿದೆ. ಮತ್ತೆ ಸೋತೆ. ಸೋಲಿನ ರುಚಿಯಿದ್ದ ನನಗೆ ಈ ಬಾರಿ ಕೊನೆ ಪ್ರಯತ್ನ ಎಂದು ನಿರ್ಧರಿಸಿ ಕಾಲೇಜು ಆರಂಭಕ್ಕೂ ಮೊದಲೆ ಮಂಗಳೂರಿನಲ್ಲಿ ನನ್ನ ಕೋಚ್ ಭಾಗ್ಯ ಶ್ರೀರವರ ಬಳಿ ತರಬೇತಿ ಆರಂಭಿಸಿದೆ. ನಾನು ಮತ್ತು 2 ಬಿ.ಕಾಂನ ಜತಿನ್, ಪಿಯುಸಿಯ ಸ್ವಾತಿ ಮಂಗಳೂರು ವಿಭಾಗ ಪ್ರತಿನಿಧಿಸಲು ಆಯ್ಕೆಯಾದೆವು.



ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ರಾಜಧಾನಿಯಲ್ಲಿ 4 ಆಯ್ಕೆ ಶಿಬಿರಗಳು ಭಾರತೀಯ ವಾಯು ಸೇನ ಕ್ಯಾಂಪ್‌ನಲ್ಲಿ ನಡೆಯಿತು. ಶಿಬಿರದಲ್ಲಿ ಕರ್ನಾಟಕ ಮತ್ತು ಗೋವ ರಾಜ್ಯ ಪ್ರತಿನಿಧಿಸಲು ನಾನು, ಜತಿನ್,ಮತ್ತು ಉಡುಪಿಯ ದಿಕ್ಷಾ ಆಯ್ಕೆಯಾಗಿ ಹಿರಿಯ ಕೋಚ್ ಪರಶುರಾಮ್‌ರಿಂದ 1 ತಿಂಗಳ ತರಬೇತಿ ಪಡೆದು ವಿವಿಧ ವಿಭಾಗಳಿಂದ ಕರ್ನಾಟಕ ಮತ್ತು ಗೋವ ರಾಜ್ಯ ಪ್ರತಿನಿಧಿಸಲು ಆಯ್ಕೆಗೊಂಡಿದ್ದ 111 ಕೆಡೆಟ್‌ಗಳ ತಂಡದೊಂದಿಗೆ ಡಿಸೆಂಬರ್ 28ಕ್ಕೆ ರಾಷ್ಟ್ರ ರಾಜದಾನಿ ದೆಹಲಿ ಕಡೆಗೆ ಪ್ರಯಾಣ ಆರಂಭಿಸಿದೆವು.

**ಚಳಿ ಮತ್ತು ಸ್ಪರ್ಧೆ ..**

ಹೊಸ ವರ್ಷಕ್ಕೆ ದೆಹಲಿ ತಲುಪಿದ ನಾವು 1 ಡಿಗ್ರಿ ಚಳಿ ಸ್ವಾಗತ ಕೋರಿತು. ಜನವರಿ 3ಕ್ಕೆ ಶುರುವಾಗಿ ಜನವರಿ 14ಕ್ಕೆ ನನ್ನ ಸ್ಪರ್ಧೆ ಮುಗಿಯಿತು. ನಾವು ತಯಾರಿಸಿದ ನೌಕ ಮಾದರಿ ತ್ರಿಕಂಡ್ 17 ರಾಜ್ಯಗಳ ನಡುವೆ "ಅಖಿಲ ಭಾರತ ಉತ್ತಮ ನೌಕ ಮಾದರಿ" ಎಂಬ ಪ್ರಶಂಶೆಗೆ ಪಾತ್ರವಾಯಿತು, ಮೂರು ಸೇನಾ ಮುಖ್ಯಸ್ಥರು, ರಕ್ಷಣಾ ಮಂತ್ರಿ ಇನ್ನಿತರ ಗಣ್ಯರ ಮುಂದೆ ನಮ್ಮ ಮಾದರಿ ಪ್ರದರ್ಶಿಸಿಲಾಯಿತು. ದೆಹಲಿ ದರ್ಶನ್, ನೌಕ ಸೇನೆ ಮುಖ್ಯಸ್ಥರ ಮನೆ ಹಾಗೂ ಪ್ರಧಾನಿ ಮೋದಿಯವರ ಮನೆಗೆ ಹೋಗಲು ಅವಕಾಶ ದೊರೆಯಿತು. 28ರಂದು ಆರ್ಮಿ ಪರೇಡ್ ಮೈದಾನದಲ್ಲಿ ನಡೆದ ಪ್ರಧಾನ ಮಂತ್ರಿ ರ‍್ಯಾಲಿಯಲ್ಲಿ ಪರೇಡ್ ಮಾಡುವ ಅವಕಾಶ ಕೂಡ ದೊರೆಯಿತು..

**ದೆಹಲಿಯಲ್ಲಿ ಎಸ್.ಡಿ.ಎಂ...**

ಗಣರಾಜ್ಯ ಪರೇಡ್‌ಗೆ ಆಯ್ಕೆಯಾದ 4ಜನ ವಿದ್ಯಾರ್ಥಿಗಳಲ್ಲೆ ರತ್ನಮಾನಸದ ಹಳೇವಿದ್ಯಾರ್ಥಿ ಮಧು ಕಿರಣ್ ಹಾಗೂ ನಮ್ಮ ಕಾಲೆಜಿನ ಹಳೇ ವಿದ್ಯಾರ್ಥಿ, ಗಣರಾಜ್ಯ ಪರೇಡ್‌ನ ಹಿರಿಯ ಸೇನಾ ಅಧಿಕಾರಿ ಕರ್ನಲ್ ನಿತಿನ್ ಭಿಡೆ ಕೂಡ ಇದ್ದರೂ. ಅಲ್ಲದೇ ಎಲ್ಲಾ 6 ಮಂದಿ ಪ್ರಧಾನ ಮಂತ್ರಿ ನಿವಾಸದಲ್ಲಿ ಭೇಟಿಯಾಗಿದ್ದು ಅವಿಸ್ಮರಣಿಯ. ಅಲ್ಲದೆ ಕರ್ನಾಟಕದಲ್ಲಿಯೆ ಅತೀ ಹೆಚ್ಚು ವಿದ್ಯಾರ್ಥಿಗಳು ಗಣ–ರಾಜ್ಯ ಪರೇಡ್‌ಗೆ ಆಯ್ಕೆಯಾಗಿದ್ದು ನಮ್ಮ ಕಾಲೆಜಿನಿಂದ ಎಂಬುದು ಮತ್ತೊಂದು ಹೆಮ್ಮೆ. ನನ್ನ ಪ್ರಯತ್ನ ಹಾಗೂ ಕಾಲೆಜಿನ ಪ್ರೋತ್ಸಹ ಹಾಗೂ ಎನ್.ಸಿ.ಸಿ ಅಧಿಕಾರಿ ಲೆಫ್ಟಿನೆಟ್ ಶ್ರೀಧರ್ ಭಟ್ರರವರ ತರಬೇತಿ ಈ ಸಾಧನೆಗೆ ಕಾರಣವಾಯಿತಿ.

– ಶ್ಯಾಮ್ ಪ್ರಸಾದ್
I ಬಿ.ಎ

## ಸತ್ಯ

ಕತ್ತಲು ಕವಿಯುತ್ತಿದೆ ಈ ಜಗದಲ್ಲಿ
ಸತ್ಯವು ಕತ್ತಲಲ್ಲಿ ಮುಳುಗುತ್ತಿದೆ
ಸುಳ್ಳು ಪ್ರಕಾಶಿಸುತ್ತಿದೆ
ಅದು ಮಾರಿಯಂತೆ ರುದ್ರ ತಾಂಡವ ವಾಡುತ್ತಿದೆ.

ಕತ್ತಲ ಮರೆಯಲ್ಲಿ ಸಿಲುಕಿದೆ ಆ ಸತ್ಯ
ಸೆರೆವಾಸದಿಂದ ಹೊರ ಬರುವುದು ಯಾವಾಗ
ಸೂರ್ಯನಂತೆ ಬೆಳಕಾಗುವುದು ಯಾವಾಗ
ಪ್ರಾಮಾಣಿಕರಿಗೆ ಕಣ್ಣಾಗುವುದು ಯಾವಾಗ

ದುಷ್ಟರ ಕೈಯಲ್ಲಿ ಸಿಲುಕಿದೆ ಈ ಭೂಮಿ
ಅಪ್ರಾಮಾಣಿಕ ವಾಗುತ್ತಿದೆ ಈ ಜಗತ್ತು
ಕ್ರೂರತನದ ಸೆಳೆತಕ್ಕೆ ಸಿಕ್ಕಿ ನರಳುತ್ತಿದೆ ಜನಾಂಗ
ಆದರೂ ಕತ್ತಲ ಮರೆಯಲ್ಲಿ ಸತ್ಯದ ದೀಪ ಉರಿಯುತ್ತಿದೆ

ಕಲಿಯುಗದಲ್ಲಿ ಕ್ರೌರ್ಯ ಪ್ರದರ್ಶಿಸುತ್ತಿದೆ ಈ ಜಗತ್ತು
ಆದರೂ ಸತ್ಯ ಎಂದು ಸಾಯಲ್ಲ
ಅಪ್ರಾಮಾಣಿಕರು ಎಂದು ಉಳಿಯಲ್ಲ
ಅಸತ್ಯವೆಂದು ಸತ್ಯವಾಗಲೂ ಸಾಧ್ಯವೇ ಇಲ್ಲ

ಸತ್ಯವೆನ್ನುವುದು ಚಂದ್ರ ಸೂರ್ಯನ ಬೆಳಕು
ಈ ಬೆಳಕು ಹಲವರನ್ನು ಬದುಕಿಸಿದೆ ಬದುಕಿಸುತ್ತದೆ
ದುಷ್ಟರಿಗೆ ಖಳನಾಯಕನಾಗಿರುವುದೇ ಸತ್ಯ
ಶಿಷ್ಟರಿಗೆ ನಾಯಕನಾಗಿರುವುದು ಸತ್ಯ.

– ಶರಣ್ಯ
III ಬಿ.ಎ



**ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ಉಜಿರೆಯ ವಿದ್ಯಾರ್ಥಿಗಳು ತೇರ್ಗಡೆ**

ಅಮರನಾಥ್ ನಿಖಿಲ್ ಕೆ ಬೋಪಣ್ಣ ಪಿ. ಸಾಗರ್

ಶ್ರೀದೇವಿ ರಕ್ಷಾ ಜಿ

**ಉಜಿರೆ:** ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ರಾಜ್ಯ ಸಂಸ್ಥೆಯ ವತಿಯಿಂದ ದಾವಣಗೆರೆಯ ಕೊಂಡಜ್ಜಿಯಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ಉಜಿರೆ ಶ್ರೀ ಧ.ಮಂ. ಪದವಿ ಕಾಲೇಜಿನ 6 ವಿದ್ಯಾರ್ಥಿಗಳು ಭಾಗವಹಿಸಿ, ತೇರ್ಗಡೆ ಹೊಂದಿದ್ದಾರೆ. ಅಂತಿಮ ಬಿ.ಕಾಂ ನ ನಿಖಿಲ್ ಕೆ ಯೆಚ್, ಸಾಗರ್, ಶ್ರೀದೇವಿ ಮತ್ತು ಅಂತಿಮ ಬಿ ಬಿ ಎ ಯ ಅಮರನಾಥ್, ಬೋಪಣ್ಣ ಪಿ. ಎನ್, ರಕ್ಷಾ ಜಿ ಸೇರಿದಂತೆ ಒಟ್ಟು 4 ರೋವರ್ಸ್ ಹಾಗೂ 2 ರೇಂಜರ್ಸ್ ವಿದ್ಯಾರ್ಥಿಗಳು ರಾಜ್ಯಪಾಲರಿಂದ ಪ್ರಶಸ್ತಿ ಸ್ವೀಕರಿಸಲು ಅರ್ಹರಾಗಿದ್ದಾರೆ. ಇವರಿಗೆ ರೋವರ್ ಸ್ಕೌಟ್ ಲೀಡರ್ ಪ್ರಸಾದ್ ಕುಮಾರ್, ರೇಂಜರ್ ಲೀಡರ್ ವಾಸಂತಿ ತರಬೇತಿ ನೀಡಿದ್ದಾರೆ.

# ತೇಜೊ ತೇಜಸ್ಸು ಆಕರ್ಷಣೆ

ಕ್ರಿ.ಶ. 1492ರಲ್ಲಿ ಕೊಲಂಬಸ್ ದಕ್ಷಿಣ ಅಮೇರಿಕಾವನ್ನು ತಲುಪಿ ಅದನ್ನೇ ಭಾರತ ಎಂದುಕೊಂಡು ಬಿಡುತ್ತಾನೆ. ಕ್ರಿ.ಶ 1518ರಲ್ಲಿ ವಿಜಯನಗರದ ಶ್ರೀಕೃಷ್ಣದೇವರಾಯನಿಗೆ ಗಂಡುಮಗು ಹುಟ್ಟುತ್ತೆ. ಈ ಎರಡು ಇಸವಿಗಳ ನಡುವಿನಲ್ಲಿರುವ 26 ವರ್ಷಗಳ ಅವಧಿಯೇ ಕತೆ ನಡೆಯುವ ಅವಧಿ! ಯಾವ ಕತೆ ಎಂದುಕೊಳ್ಳುತ್ತಿದ್ದೀರ? ಕನ್ನಡದ ವಿಶಿಷ್ಟ ಸಾಹಿತಿ ವಸುಧೇಂದ್ರರು ಹೊಸ ಕಾದಂಬರಿಯನ್ನು ಬರೆದಿದ್ದಾರೆ. 'ತೇಜೋ–ತುಂಗಭದ್ರಾ' ಎಂದು. ಜನವರಿಯಲ್ಲಿ ಬಿಡುಗಡೆಯಾಗಿ ಫಬ್ರವರಿಯಲ್ಲಿ 4ನೇ ಮುದ್ರಣ ಕಾಣುತ್ತಿರುವ ಪುಸ್ತಕ ಇದು! ನಮ್ಮ ಕ್ಯಾಂಟೀನ್‌ನ ಬಿಸಿ ಮಸಾಲೆ ದೋಸೆಯಂಥ–ದ್ದು.




ತೇಜೋ ಎಂಬುದು ಸ್ಪೇಯ್ನ್ ಮತ್ತು ಪೋರ್ಚುಗಲ್‌ಗಳಲ್ಲಿ ಹರಿವ ನದಿ; ತುಂಗಭದ್ರಾ ಕರ್ನಾಟಕದ ನದಿ! ಈ ಕಾದಂಬ–ರಿಯಲ್ಲಿ ಎರಡು ಕತೆಗಳಿವೆ. ಒಂದು ಪೋರ್ಚುಗಲ್‌ನ ಲಿಸ್ಬನ್ ನಗರದ ಬೆಲ್ಲಾ ಮತ್ತು ಗೇಬ್ರಿಯಲ್ ಎಂಬ ಪ್ರೇಮಪಕ್ಷಿಗಳ ಕತೆ. ಇನ್ನೊಂದು ಹಂಪಿಯ ಹತ್ತಿರದ ತೆಂಬಕಪುರದ ಹಂಪವ್ವ–ಕೇಶವರ ಕತೆ! ಕಾದಂಬರಿಯಲ್ಲಿ ಆರುಭಾಗಗಳಿದ್ದು, ಮೊದಲನೇ ಭಾಗತೇಜೋ, ಎರಡನೇ ಭಾಗ ತುಂಗಭದ್ರಾ, ಹೀಗೆ ಅದಲು ಬದಲಾಗುತ್ತಾ ಕೊನೆಗೊಮ್ಮೆ ಆರನೇ ಭಾಗ ತೇಜೋ–ತುಂಗಭದ್ರಾ ಎಂದಾಗಿ ಮುಗಿಯುತ್ತದೆ. ಓದಗರಿಗೆ ತೇಜೋವಿನಲ್ಲಿ ಈಜುವಾಗ ಯಾವಾಗ ಇಲ್ಲಿಯ ತುಂಗಭದ್ರೆಯಲ್ಲಿ ಈಜುತ್ತೇನೋ ಎಂದು ಆಸೆಯಾಗುತ್ತದೆ. ಹಾಗೆಯೇ ಇಲ್ಲಿ ಈಜುವಾಗ–ಯಾವಾಗ ಅಲ್ಲಿ ಈಜುತ್ತೇನೋ ಎಂಬ ಕುತೂಹಲ ಉಂಟಾಗುತ್ತದೆ!

ಪೋರ್ಚುಗಲ್‌ನ ಅಂದಿನ ರಾಜ–ಕೀಯ, ಸಾಮಾಜಿಕ, ದುಡ್ಡಿನ ಪರಿಸ್ಥಿತಿಗಳು ಇವೆಲ್ಲಾ ಒಂದೆಡೆಯಾದರೆ, ಇನ್ನೊಂದೆಡೆ ವಿಜಯನಗರದ ವೈಭವ, ಇಲ್ಲಿನ ಕೆಲವು ಕೆಟ್ಟ ಪದ್ಧತಿಗಳು, ಯುದ್ಧ, ಸೈನ್ಯ, ಸೈನಿಕರ ಅತ್ಯಾಚಾರ – ಹೀಗೆ ಪ್ರತಿಯೊಂದೂ ಇಲ್ಲಿ ಕಾಣಿಸುತ್ತಾ ಹೋಗುತ್ತದೆ. ಇಲ್ಲಿ ಚಿತ್ರಿತವಾಗಿರುವ ವಿಸ್ಮಯಗಳು ನಮ್ಮ ಅನುಭೂತಿಗೂ ಬರಬೇಕಾದರೆ ಈಗಲೇ ಪುಸ್ತಕವನ್ನು ಅಂಗಡಿಯಲ್ಲೋ ಪ್ಲೇಸ್ಟೋರ್‌ನಲ್ಲೋ ಕೊಂಡು ಓದುವುದರ ಹೊರತಾಗಿ ಬೇರೆ ಮಾರ್ಗವೇ ಇಲ್ಲ.

– ಹೊವಿಶಂಕ
II ಬಿ.ಎ.

# ALL I NEED IS YOU

Mom, whenever I had myself under the blanket pretending to be not hungry, I waited for you to knock on the door of my room to come in, drag me out, sit with the family to have dinner. Even if I created tantrum as I sat down with you, honestly, all was fake, deep inside I would be relieved, a important part of our little family. Perhaps I always loved it.



I'd sit and wait, wondering if you'd not recognized my absence nor worry of my where-about, your little girl, and your own flesh and blood who just years ago came emerging.

You celebrated my birth, eagerly waited for my arrival even in your busy schedules and workloads, all time sharing your positive vibes. Your love never faded until elementary, I was completely your girl.As years passed your scares increased, every interaction lead to squabble and nothing else. But the more you unchaperoned, kept me aside, more Annoying and aggressive I became. You thought I was tough, carefree girl. You always thought I's winning, but I wasn't... because I wanted you to stand as strong wall to lean upon, contrastingly you shrunk. You're already dubious, valuing others words and opinion more than my pleadings.

Now I understand the whole plot. I was a reckless teenager with mood swings, so were you, a confused and worried mother of same, who witnessed all my absurd behavior and being fed up of my temper! When I go through the stream of memories, I feel instead of pleading and creating nuisance I could treat you like a best friend. I could've assured you through words that 'Mom let me continue being your daughter, your flesh and blood, don't get disappointed too quickly!' this'd be a better version!

Now we're both equivalent, you're the one who understands me like none. Mom, I need struggles they help me to build my identity. To be independent doesn't mean to be orphaned; I am taking my first steps in the world and I want to feel that, whenever I turn back I should see you standing strong, smiling at me "Hey brave, keep going, I'm here". I want you to be there...wrap me in your love during cold grey days.

Hey Mom, your presence is exactly how I was want you to be. All I'm asking you is to be my mom.

With love
Your li'l girl.

- Ila gowri, II BA

# ನಮ್ಮತನವನ್ನು ನೋಡಿಕೊಳ್ಳೋಣ

ಕ್ಯಾಂಟೀನಿನಲ್ಲಿ ಕುಳಿತು ಕಾಫಿ ಕುಡಿಯುತ್ತಿದ್ದೆ. ಗೆಳತಿಯೊಬ್ಬಳು ಪಕ್ಕಕ್ಕೆ ಬಂದು ಮಂಕಾಗಿ ಕುಳಿತುಬಿಟ್ಟಳು. ಆಕೆಯ ಮೌನಕ್ಕೆ ಕಾರಣವೇನು? ಅಂತ ಕೇಳಿದೆ. ಸುದೀರ್ಘ ಮನವಿಯ ಬಳಿಕ ತನ್ನ ಚಿಂತೆಯ ಕಾರಣವನ್ನು ಬಾಯಿ ಬಿಟ್ಟು ಹೇಳಿದಳು. ಯಾರೋ ಆಕೆಗೆ ಲೆಕ್ಚರರ್ಸ್‌ಗೆ ಅವಳೆಂದರೆ ಅಚ್ಚುಮೆಚ್ಚು ಎನ್ನುವ ಕಾರಣಕ್ಕೆ 'ಬಕೆಟ್ ರಾಣಿ' – ಅಂದುಬಿಟ್ಟರಂತೆ. ಇದನ್ನೇ ಗಂಭೀರವಾಗಿ ಚಿಂತಿಸುತ್ತಾ ಮೌನವಾಗಿದ್ದಳು ನನ್ನ ಗೆಳತಿ...

ಬಹುಶಃ ಈ ಮಾತನ್ನು ನಾವೆಲ್ಲರೂ ಕೇಳಿಯೇ ಇರುತ್ತೇವೆ ಅಲ್ವಾ? ನಮ್ಮ ಬಗ್ಗೆ ಇನ್ನೊಬ್ಬರ ಬಳಿ ಹೋಗಿ ತೋಚಿದ್ದನ್ನು ಒದರುವ ಪ್ರವೃತ್ತಿ ಇಂದು ನೆನ್ನೆಯದ್ದಂತೂ ಖಂಡಿತಾ ಅಲ್ಲ. ಹೈಸ್ಕೂಲ್ ತನಕ ಇಂತಹ ಅನುಭವಗಳು ತೀರಾ ವಿರಳ. ಆದರೆ ನಾವೆಂದು ಕಾಲೇಜು ಮೆಟ್ಟಿಲನ್ನೇರುತ್ತೇವೆಯೋ ಹೊಸ ಮುಖಗಳು, ವಿಭಿನ್ನ ವ್ಯಕ್ತಿ–ವ್ಯಕ್ತಿತ್ವಗಳು ಕೂಡಾ ನಮಗೆದುರಾಗುತ್ತವೆ. ಸಮಾಜ ನಮ್ಮನ್ನು ಹೇಗೆ ಒಪ್ಪಿಕೊಳ್ಳುತ್ತದೆ ಅನ್ನುವ ಸಾಮಾನ್ಯ ವಿದ್ಯೆ ಇಲ್ಲಿಂದಲೇ ದೊರೆಯುವುದು. ಒಬ್ಬಳನ್ನು ಕಂಡರೆ ಇನ್ನೊಬ್ಬಳಿಗಾಗದು ಅಥವಾ "ಅವನನ್ನು ಕಂಡರೆ ನನಗಾಗಲ್ಲಪ್ಪಾ" ಅಂತ ಮೂಗು ಮುರಿಯುವವರೇ ಹೆಚ್ಚು...

ತುಂಬಾ ಓದುವ ಹುಡುಗ ಅಥವಾ ಹುಡುಗಿಯಾಗಿದ್ದರೆ 'ಗಾಂಧಿ ಪೀಸ್' ಅಂತಲೋ, ಸ್ವಲ್ಪ ತರಗತಿಯಲ್ಲಿ ಮೌನವಾಗಿದ್ದರೆ



'ಆಟಿಟ್ಯೂಡ್' ಅಂತಲೋ, ಸ್ವಲ್ಪ ನಗು ನಗುತ್ತಾ ಎಲ್ಲರೊಡನೆ ಮಾತನಾಡುತ್ತಾ ಇದ್ದರೆ 'ಡವ್ ಮಾಡ್ತಾರೆ' ಅಂತಲೋ, ಲೆಕ್ಚರರ್ಸ್ ಜೊತೆಗೆ ಒಡನಾಟದಿಂದ ಇದ್ದರೆ 'ಬಕೆಟ್ ಅಥವಾ ಸಿಂಟ್ಯಾಕ್ಸ್' ಅಂತಲೋ, ಸ್ವಲ್ಪ ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರಿಗೆ 'ನೀನ್ ಬಿಡಮ್ಮಾ/ ಬಿಡಪ್ಪಾ , ನಿಂಗೇನು ಟ್ಯಾಲೆಂಟ್ ಇದೆ, ಸಾಗರದಲ್ಲಿ ಈಜಿ ಬರ್ತೀಯಾ' ಅಂತಲೋ ಇನ್ನೇನೇನೋ ಮಾತುಗಳು. ಇದನ್ನು ಪ್ರೋತ್ಸಾಹದ ನುಡಿಗಳು ಅಂತೆನಿಸಬೇಕೋ ಅಥವಾ ಅಸೂಯೆ ತುಂಬಿದ ಚುಚ್ಚುಮಾತೆಂದುಕೊಳ್ಳಬೇಕೋ ಅನ್ನೋದೆ ಕಡೆಗುಳಿಯುವ ಏಕೈಕ ಪ್ರಶ್ನೆ..

ಇನ್ನೊಬ್ಬರನ್ನು ಆಡಿಕೊಳ್ಳುವ ಕೆಲಸ ಯಾಕೆ ಬೇಕು ಅಲ್ವಾ? ಇದು ಮಾಡಲು ಏನೂ ಕೆಲಸವಿಲ್ಲದವರು ಮಾಡುವ ವ್ಯರ್ಥ ಕಾಯಕ. ಒಬ್ಬರನ್ನು ಕಂಡಾಕ್ಷಣ ಇವರು ಇಂಥವರು' ಎಂದು ನಮಗೆ ನಾವೇ ತೀರ್ಮಾನಕ್ಕೆ ಬರುವುದು ಸರಿಯಲ್ಲ. ಪ್ರತಿಯೊಬ್ಬರನ್ನೂ ಪ್ರೀತಿಸಲು ಕಲಿತಾಗ ಈ ರೀತಿ ಮಾತನಾಡಲು ಮನಸ್ಸೂ ಬರುವುದಿಲ್ಲ. ಮತ್ತೊಬ್ಬರ ಬಗ್ಗೆ ಕಮೆಂಟ್ಸ್ ಪಾಸ್ ಮಾಡುವ ಮುನ್ನ ಸ್ವಲ್ಪ ಯೋಚಿಸೋಣ, ಏಕೆಂದರೆ ತೋರು ಬೆರಳೊಂದು ಇನ್ನೊಬ್ಬರತ್ತ ನೋಟ ಬೀರಿದರೆ ಉಳಿದ ನಾಲ್ಕು ಬೆರಳು ನಮ್ಮತ್ತಲೇ ದಿಟ್ಟಿಸಿ ನೋಡುತ್ತಿರುತ್ತವೆ ,ಅಲ್ವಾ?!!!

ಪ್ರಜ್ಞಾ ಒಡಿಲ್ನಾಳ.
III ಬಿ.ಎ.

## CARTOON ADDA







## HISTORICAL CELEBRATION

The 45th annual congress of the Epigraphical society of India and the 39th annual conference of the Place Names Society of India held a joint session at Vasanta Mahal, Dharmasthala in association with SDM College, Ujire on 28th and 29th of February.

The session was inaugurated by Dr.D.Veerendra Heggade. The Chief guests were Prof.S.Prabhakar, D, Harshendra Kumar, Dr.B.Yashovarma, Mr.Jai Prakash, and Dr. krishendu Ray.

There was an exhibition at Amruthavarshini Sabha Bhavana regarding important inscriptions from different parts of the country from 3rd century B.C. to Vijayanagar period .

The Validictory session was on 29th February and the chief guest was Hemavathi V.Heggade.

Prof.Sateeshchandra.S, Dr. K. Munirathanam, , Dr.M.D.Sampath, staff and students of the college were present in the session.

## ಯಕ್ಷತ್ಸೋವದಲ್ಲಿ ಪ್ರಶಸ್ತಿ

ಎಸ್.ಡಿ.ಎಂ ಲಾ ಕಾಲೇಜು ಮಂಗಳೂರಿನಲ್ಲಿ ನಡೆದ ಯಕ್ಷತ್ಸೋವ ಮೇಳ ದಿನಾಂಕ 22 ಮತ್ತು 23 ರಂದು ನಡೆದ ಈ ಮೇಳದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಯಾದ ಮುಖೇಶ ದೇವಧರ್ ಸಮಗ್ರ ವೈಯಕ್ತಿಕ ತೃತೀಯ ಬಹುಮಾನ ಪಡೆದುಕೊಂಡಿದ್ದಾರೆ.ಇವರಿಗೆ ಚಿಗುರು ಬಳಗದಿಂದ ಅಭಿನಂದನೆಗಳು.

## First place in Sanskrit Competition

The 13 students of department of Sanskrit and Dr.Shridhar Bhat.Faculty of Dept of Sankrit attended a national level Seminar at Canara College, Mangalore . The Students have participated in PowerPoint Presentation Competition and baged first and second Price. Vedashree Of First BSC Secured First place And Varshini Of Second BCom Baged Second place. A heartly congratulations from chiguru team.

# ನವ ಭಾರತದ ನವೋದ್ಯಮಿಗಳನ್ನು ರೂಪಿಸಲಿದೆ ಬಿ.ವೋಕ್.

ಭಾರತದ ನೈಜ ಸಂಪತ್ತೆಂದರೆ ನಮ್ಮ ದೇಶದ ಜನಸಂಖ್ಯೆ. ಆದರೆ 2019ರ ಇಂಟ–ನ್ಯಾಷನಲ್ ಲೇಬರ್ ಆರ್ಗನೈಸೇಶನ್ ಸಮೀಕ್ಷೆ ಪ್ರಕಾರ ಭಾರತದಲ್ಲಿ ೩.೫%ರಷ್ಟು ನಿರುದ್ಯೋಗವಿತ್ತು. 2016-2017ರಲ್ಲಿ ಕೂಡ ೩.೪%ರಷ್ಟು ನಿರುದ್ಯೋಗವಿತ್ತು. ಹಾಗಾಗಿ ನಿರುದ್ಯೋಗವನ್ನು ತಡೆಯಲು ಯು.ಜಿ.ಸಿ.ಯು ಭಾರತದಲ್ಲಿ ಕೌಶಲ್ಯ ಅಭಿವೃದ್ಧಿ ಆಧಾರಿತ ಶಿಕ್ಷಣವನ್ನು 27 ಫೆಬ್ರವರಿ 2014ರಂದು ಪರಿಚಯಿಸಿತು ಅದುವೇ ಬಿ.ವೋಕ್(ಬ್ಯಾಚುಲರ್ ಆಫ್ ವೊಕೇಶನ್). ಬಿ.ವೋಕ್ ಪದವಿ ಶಿಕ್ಷಣವು ವಿಶ್ವವಿದ್ಯಾಲಯ ಮಟ್ಟದ ಕಾಲೇಜು ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿದೆ.

ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಉದ್ಯೋಗ ಸಂಬಂಧಿತ ಕೌಶಲ್ಯಗಳನ್ನು ಬೆಳೆಸುವ ಉದ್ದೇಶವನ್ನು ಬಿ.ವೋಕ್ ಹೊಂದಿದೆ. ಅಲ್ಲದೆ ವಿದ್ಯಾರ್ಥಿಗಳಲ್ಲಿ ಕ್ರಿಯಾತ್ಮಕ ಚಿಂತನೆಯನ್ನೂ, ಪ್ರಾಯೋಗಿಕ ಜ್ಞಾನವನ್ನೂ, ಉದ್ಯಮಶೀಲತೆಯನ್ನೂ ಉದ್ದೀಪಿಸುವ ಮೂಲಕ ಅವರನ್ನು ಉದ್ಯೋಗದಾತರನ್ನಾಗಿಸುವ ಮಹತ್ತರ ಉದ್ದೇಶವನ್ನೂ ಬಿ.ವೋಕ್ ಒಳಗೊಂಡಿದೆ.

ಭಾರತದಲ್ಲಿ ಒಟ್ಟು ೬೭ ಯೂನಿವರ್ಸಿಟಿಗಳು ಬಿ.ವೋಕ್ ಪದವಿ ಶಿಕ್ಷಣವನ್ನು ಪ್ರಾರಂಭಿಸಿವೆ. ಸದ್ಯಕ್ಕೆ ಕರ್ನಾಟಕದಲ್ಲಿ ಒಟ್ಟು 12 ಯೂನಿವರ್ಸಿಟಿಗಳಲ್ಲಿ ಬಿ.ವೋಕ್ ಪದವಿ ಶಿಕ್ಷಣ ಲಭ್ಯವಿದೆ. ಬಿ.ವೋಕ್ ಕೋರ್ಸ್‌ಗಳಿಗೆ ಸೇರಲು ವಿದ್ಯಾರ್ಥಿಯು 12ನೇ ತರಗತಿ ಅಥವಾ ತತ್ಸಂಬಂಧಿತ ಅರ್ಹತೆಯನ್ನು




ಹೊಂದಿರಬೇಕು. ನಮ್ಮ ಕಾಲೇಜಿನಲ್ಲಿ ಪ್ರಮುಖವಾಗಿ ಮೂರು ವಿಭಾಗದಲ್ಲಿ ಬಿ.ವೋಕ್ ಪದವಿಯನ್ನು ಆರಂಭಿಸಲಾಗಿದೆ. ಅವೆಂದರೆ

1) ಫಿಲ್ಮ್ಂ ಮೇಕಿಂಗ್
2) ರೀಟೇಲ್ ಅಂಡ್ ಸಪ್ಲೈ ಚೈನ್ ಮ್ಯಾನೇಜ್‌ಮೆಂಟ್
3) ಸಾಫ್ಟ್‌ವೇರ್ ಆ್ಯಂಡ್ ಆ್ಯಪ್ ಡೆವೆಲಂಪ್‌ಮೆಂಟ್

ಬಿ.ವೋಕ್ ಕೋರ್ಸುಗಳು 25% ಥಿಯರಿ ಮತ್ತು 75% ಪ್ರಾಕ್ಟಿಕಲ್ಸ್‌ನಿಂದ ಕೂಡಿವೆ. ಈ ಸ್ಥಿತಿಗೆ ಅನುಗುಣವಾಗಿ ಎಸ್.ಡಿ.ಎಂ ಹಲವು ಗೌರವಾನ್ವಿತ ಕೈಗಾರಿಕೆ/ಉದ್ಯಮಗಳೊಂದಿಗೆ ಹಲವಾರು ಒಪ್ಪಂದಗಳಿಗೆ ಸಹಿ ಹಾಕಿದೆ. ಅವರು ವಿದ್ಯಾರ್ಥಿಗಳಿಗೆ ಇದರನ್ವಯ ವಿಶೇಷ ತರಬೇತಿ ನೀಡಲು ಒಪ್ಪಿಕೊಂಡಿದ್ದಾರೆ. ಈ ಎಲ್ಲ ವಿಧಾನಗಳು ವಿದ್ಯಾರ್ಥಿ ಜೀವನದಿಂದ ವೃತ್ತಿಪರ ಜೀವನಕ್ಕೆ ಸುಲಭವಾಗಿ ಪರಿವರ್ತನೆಗೊಳ್ಳಲು ವಿದ್ಯಾರ್ಥಿಗಳನ್ನು ಸಿದ್ಧಪಡಿಸುತ್ತದೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುತ್ತದೆ.

ಇಲ್ಲಿ ವಿದ್ಯಾರ್ಥಿಗಳಿಗೆ ಅವಧಿ ಆಯ್ಕೆ ಮಾಡಲು ಸ್ವಾತಂತ್ರ್ಯವಿರುತ್ತದೆ. ಆರು ತಿಂಗಳಲ್ಲಿ ‘ಪ್ರಮಾಣಪತ್ರ’, ಪೂರ್ತಿ ಒಂದು ವರ್ಷ ಅಥವಾ ಎರಡು ವರ್ಷವಾದರೆ ಡಿಪ್ಲೋಮೋ ಪ್ರಮಾಣ ಪತ್ರ, ಮೂರು ವರ್ಷದ ಪೂರ್ಣಗೊಳಿಸಿದರೆ ಬಿ.ವೋಕ್ ಪದವೀಧರನಾಗುತ್ತಾರೆ. ಒಟ್ಟಾರೆ ಹೇಳುವುದಾದರೆ ಬಿ.ವೋಕ್ ಉದ್ಯೋಗಾಕಾಂಕ್ಷಿ ವಿದ್ಯಾರ್ಥಿಗಳ ಮುಂದೆ ಅವಕಾಶಗಳ ಬಾಗಿಲನ್ನೇ ತೆರೆದಿಟ್ಟಿದೆ ಎಂದೆನ್ನಬಹುದು.

– ವೈ.ಎಸ್.ಬಾಲಕೃಷ್ಣ ಆಚಾರ್ಯ
III ಬಿ.ಎ

## ಸಿನಿ ಕಹಾನಿ

ಸಿನಿಮಾ ಯಾರಿಗೆ ತಾನೇ ಇಷ್ಟ ಇಲ್ಲ ಹೇಳಿ .ಸಿನಿಮಾ ಅನ್ನೋದು ನಮ್ಮ ಜೀವನದ ನಿತ್ಯ ಚರಿ. ಅದು ನಿತ್ಯ ಅದ್ಭುತ ಸೃಷ್ಟಿಸುವ ಜಗತ್ತು



.ಕನ್ನಡ ಚಿತ್ರರಂಗವು ಸುಮಾರು ನೂರಾರು ವರ್ಷಗಳಿಂದ ಸಿನಿ ರಸಿಕರ ಮನ ತಣಿಸುತ್ತ ಬಂದಿದೆ. ಕನ್ನಡ ಚಿತ್ರರಂಗದಲ್ಲಿ ನಮಗೂ ಒಂದು ಟೈಮ್ ಬರುತ್ತೆ ಎಂದು ನಂಬಿ ಸದಾಭಿರುಚಿಯ ಸಿನಿಮಾ ಮಾಡುತ್ತಿದ್ದವರು ತಮ್ಮ ಪ್ರಯತ್ನವನ್ನು ನಿಲ್ಲಿಸಲಿಲ್ಲ ಹೊಸ ಮಾದಯ್ಯ ಸಿನಿಮಾ ಮಾಡುವುದು ಜೇಬಿಗೆ ಕತ್ತರಿ ಹಾಕಿಸಿಕೊಳ್ಳುವ ಪ್ರಯತ್ನ ಎಂದರು ಮುನ್ನುಗ್ಗಿ ಒಳ್ಳೆ ಕಾಲ ಬಂದೇ ಬರುತ್ತದೆ ಅದರಲ್ಲಿ ಬೇರೆ ಭಾಷೆಯಲ್ಲಿ ಹಾವಳಿ ಥಿಯೇಟರ್ ಸಮಸ್ಯೆ ಡಿಸ್ಟ್ರಿಬ್ಯೂಟರ್ಸ್ ನಮ್ಮ ಬಂಡವಾಳಕ್ಕೆ ಕ್ಯಾರೆ ಎನ್ನುವುದಿಲ್ಲ. ಸಿನಿಮಾ ಒಂದು ಮನರಂಜನಾ ಮಾಧ್ಯಮ ಸರಿ ಆದರೆ ಕೇವಲ ಮನರಂಜನೆಯ ಸಿನೆಮಾ ಸರ ಕಾಗು ವುದನ್ನು ಪ್ರೇಕ್ಷಕ ಮಹಾಪ್ರಭು ಬಯಸುವುದಿಲ್ಲ ಮನೋರಂಜನೆಯ ಜೊತೆಜೊತೆಗೆ ಸಿನಿಮಾದಿಂದ ಏನಾದರೂ ಕಲಿಯಬಹುದೇ ಎಂದು ಬಯಸುವವ–ರಿದ್ದಾರೆ.ಸಿನಿಮಾ ಧ್ವನಿಸುವ ನಾಡಿಮಿಡಿತವನ್ನು ಗಳಿಸುವಲ್ಲಿ ಇಂದಿನ ಸ್ಟಾರ್ ನಟರ ಸಿನಿಮಾಗಳು ಸೋತಿವೆ. ರಿಯಲ್ ಎಸ್ಟೇಟ್ ಕುಲಗಳು ಸಿನಿಮಾರಂಗದಲ್ಲಿ ಕಾರ್ಯಕರ್ತ–ರಿಂದ ಕಳಪೆ ಚಿತ್ರಗಳನ್ನು ಅಭಿನಯಿಸುವಂತೆ ಮಾಡಿದ್ದು ಬೇಸರದ ಸಂಗತಿ ಸಿನಿಮಾನಟರು ಕಿರುತೆರೆಯ ಪ್ರೈಮ್ ಟೈಮಲ್ಲಿ ಕಾಣಿಸಿಕೊಂಡು ಚೀನಿ ಸ್ಕ್ರೀನ್ನಲ್ಲಿ ನೋಡುವ ಜನರಿಗೆ ತಾವು ದುಡಿದು ನಂತರ ಸಿಗುವ ಫಸ್ಟ್ ಶೋ ಇಲ್ಲ ಸೆಕೆಂಡ್ ಶೋನಲ್ಲಿ ನೋಡಬೇಕಿದ್ದ ನೆಚ್ಚಿನ ಹೀರೋ ಈವನಿಂಗ್ ಶೋ ಒಳಗೆ ಮನೆಯ ಟಿವಿ ಪರದೆ ಮೇಲೆ ಕಾಣಸಿಗುತ್ತಾನೆ ಎಂದರೆ ಯಾರು ಗುರು ಟಾಕೀಸ್ ಕಡೆ ಮುಖ ಮಾಡೋರು.ಕನ್ನಡ ಚಿತ್ರರಂಗ ದಿನದಿನಕ್ಕೂ ಕುಗ್ಗುತ್ತಿದೆ ಹೀಗೆ ಆದರೆ ಮುಂದಿನ ದಿನಗಳಲ್ಲಿ ಚಿತ್ರರಂಗ ಇತ್ತು ಅನ್ನೋದನ್ನ ಡಾಕ್ಯುಮೆಂಟರಿ ಮಾಡಿ ಮಕ್ಕಳಿಗೆ ತೋರಿಸಬೇಕಾದ ಪರಿಸ್ಥಿತಿ ಬಂದರೂ ಆಶ್ಚರ್ಯವಿಲ್ಲ. ಸಿನಿಮಾವನ್ನ ಆರಾಧಿಸಿ ಪೋಷಿಸಿ ಬೆಳೆಸುವವರು ಬೇಕಾಗಿದ್ದಾರೆ.ಮನರಂಜನೆ ಜ್ಞಾನ ಬದುಕು ಸಾಗುವ ಬಂಡಿಯ ಚಕ್ರಗಳು ಇದ್ದಂತೆ ನಡೆಸುವ ಜವಾಬ್ದಾರಿ ನಮ್ಮದು ಅಷ್ಟೇ .

– ಸುದೀಪ್ ರಾಜ್
III ಬಿ.ಎ

# Wall of Frame



ವೈಯಾರದ ಪತಂಗ



ಪ್ಲಾಸ್ಟಿಕ್ ಪಾಶ ಜಾಗೃತಿಯ ವೇಷ

(ಛದ್ಮ ವೇಷದಲ್ಲಿ ಪ್ರಥಮ ಸ್ಥಾನ ಪಡೆದ ತಂಡ)



ಬಿಂದುವಿನಿಂದ ಸಿಂಧುವಿನವರೆಗೆ ಎಸ್.ಡಿ.ಎಂ



ನಿತ್ಯದ ಹಾಡು ಪಾಡು



ಬದುಕು ಸಾಗರದಾಚೆ




ಅಳಿಲು ಸೇವೆ

ಛಾಯಾಗ್ರಹಣ : ವಿಜೇತ್ ಕೆ.ವಿ, ಅರ್ಪಿತ್, ಸುರೇಂದ್ರ


LIFE
MUST
BE
LIVED
AS
PLAY.